ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 39 ಸೆಪ್ಟಂಬರ್ 25, 1983 ಬೆಲೆ 60 ಪೈಸೆ

ಅಧಿಕಾರ ಕಳೆದುಕೊಂಡ ಕಾಂಗ್ರೆಸ್‌ನ ಸಂಸದೀಯ ವರ್ತನೆಯ ವೈಖರಿ

ಭಾರತದ ಸಂಸದೀಯ ಇತಿಹಾಸದಲ್ಲಿ ದಾಖಲೆಗಳು ಸೃಷ್ಟಿ ಯಾಗಿವೆ. ಆದರೆ ಕಾಂಗ್ರೆಸ್ ವಿರೋಧ ಪಕ್ಷವಾಗಿ ವರ್ತಿಸಬೇಕಾಗಿ ಬಂದ ಕಡೆಯಲ್ಲೆಲ್ಲಾ ಈ ದಾಖಲೆಗಳು ಹೇರಳವಾಗಿ ಸೃಷ್ಟಿಯಾಗಿವೆ. ಕರ್ನಾಟಕದ ಸಂಸದೀಯ ಇತಿಹಾಸದಲ್ಲಿ ಕೂಡ ಈ ದಾಖಲೆಗಳು ಒಂದನ್ನು ಮೀರಿಸಿ ಮತ್ತೊಂದು ಸೃಷ್ಟಿಯಾಗುತ್ತಿವೆ ಜನತೆಯ ಪ್ರತಿನಿಧಿಗಳೆನಿಸಿಕೊಂಡವರ ವರ್ತನೆಯ ಒಂದು ಮಾದರಿಯನ್ನು ಸೆಪ್ಟೆಂಬರ್ ೨೩ರಂದು ನಮ್ಮ ಸದನ ಕಂಡಿತು ಧನವಿನಿಯೋಗ ಮಸೂದೆಯನ್ನು ತಡೆ ಹಿಡಿದು ಇಡೀ ಸರಕಾರದ ಆಡಳಿತ ಯಂತ್ರವನ್ನೇ ನಿಷ್ಕ್ರಿಯವಾಗಿಸುವ ಪ್ರಯತ್ನ ನಡೆಯಿತು ರಾಜ್ಯಪಾಲರ ಬಗೆಗಿನ ...ೀತ ಪತ್ರ ಒಂದು ನೆಪ ಮಾತ್ರ ಇದೊಂದು ಪೂರ್ವ ಯೋಜಿತ ಪ್ರಯತ್ನ.

ಚುನಾಯಿತ ಸರಕಾರವನ್ನು ಉರುಳಿಸಲು ಕಾಂಗ್ರೆ ತನ್ನ ಕೌಶಲ್ಯವನ್ನು ಉಪಯೋಗಿಸಿ ಯೋಜಿಸಿರುವ ಷಡ್ಯಂತ್ರದ ಅಂಶ ಇವೇನೂ ನಮ್ಮ ದೇಶದಲ್ಲಿ ಹೊಸತಲ್ಲ ನಮ್ಮ ರಾಜ್ಯದಲ್ಲಿ ಮಾತ್ರ ಹೊಸತು ಏಕೆಂದರೆ ಇದುವರೆಗೂ ದುರಾಡಳಿತದಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡುತ್ತಿದ್ದ ಕಾಂಗ್ರೆಸ್ ಈಗ ವಿರೋಧ ಪಕ್ಷವಾಗಿ ತನ್ನ ಪ್ರತಿಭೆಯನ್ನು ಪ್ರದರ್ಶಿಸುತ್ತಿದೆ.

ಕೆಲವು ರಾಜ್ಯಗಳನ್ನು ಬಿಟ್ಟು ...ಶದಲ್ಲಿ ಮೂರು ದಶಕಗಳಿಗೂ ...ಚ್ಚು ಕಾಲ ಆಳುತ್ತಾ ಬಂದ ...ಂಗ್ರೆಸ್ ಮೂಲಭೂತವಾಗಿ ಜನ ...ರ ಯಾವುದೇ ಸಮಸ್ಯೆಯನ್ನು ...ಗೆ ಹರಿಸಲಿಲ್ಲ ತಮ್ಮ ಸ್ವಾರ್ಥಕ್ಕಾಗಿ ...ಖಲೋಲುಪ ಜೀವನ ನಡೆಸಲು ...ತ್ತು ಸ್ಥಾಪಿತ ಹಿತಾಸಕ್ತಿಗಳನ್ನು ...ಸಲು ತಮಗೆ ದೊರೆತ ಅಧಿಕಾರ ...ನ್ನು ಉಪಯೋಗಿಸಿಕೊಂಡರು.

ಕೇರಳದ ಜನತೆ ಮೊತ್ತ ಮೊದಲಿಗೆ ...ಂಗ್ರೆಸ್ಸಿನ ಧೋರಣೆಗಳ ವಿರುದ್ಧ ...ಡಿ ದೆದ್ದು ಕಮ್ಯೂನಿಸ್ಟ್ ಪಕ್ಷದ ಸರಕಾರವನ್ನು ಸ್ಥಾಪಿಸಿದರು. ಅಧಿಕಾರವನ್ನು ಕಳೆದುಕೊಂಡ ಕಾಂಗ್ರೆಸಿಗರು ಚುನಾಯಿತ ಸರಕಾರ ಜನತೆಯ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ತಮ್ಮ ಸೀಮಿತ ರಾಜ್ಯ ಅಧಿಕಾರವನ್ನು ಉಪಯೋಗಿಸಿ ಕಾರ್ಯೋನ್ಮುಖರಾಗುವುದನ್ನು ನೋಡಿ ನಾವು ಮತ್ತೆ ಬರಲಾರೆವು ಎಂದು ಭಯಗೊಂಡು, ಕಾನೂನು ಸುವ್ಯವಸ್ಥೆಯ ಸಮಸ್ಯೆಗಳನ್ನು ಸೃಷ್ಟಿಸಿ ಹೂಡದ ತಂತ್ರಗಳಿಲ್ಲ.

ಅದೇ ರೀತಿ ಪುನಃ 1968ರಲ್ಲಿ ಎಂಟು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ಬಂದಾಗಲೂ ಅವುಗಳನ್ನು ಒಂದೊಂದಾಗಿ ಎಲ್ಲ ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿ ಕಾಂಗ್ರೆಸ್ ಕೇಂದ್ರ ಸರಕಾರವು ಕಿತ್ತು ಹಾಕಿತು. ವಿಧಾನ ಸಭೆಯ ಒಳಗೂ ಹೊರಗೂ ಅರಾಜಕತೆಯನ್ನು ಕೃತಕವಾಗಿ ಸೃಷ್ಟಿಸಿ ಪಕ್ಷಾಂತರದ ಮೂಲಕ ಕಾಂಗ್ರೆಸ್ಸೇತರ ಪಕ್ಷಗಳ ಬಹುಮತವನ್ನು ಕಡಿಮೆ ಮಾಡಲು ಹವಣಿಸಿ ರಾಜ್ಯಪಾಲರನ್ನು ತಮ್ಮ ಏಜಂಟರನ್ನಾಗಿ ಉಪಯೋಗಿಸಿ ಈ ಸರಕಾರಗಳನ್ನು ಉರುಳಿಸಿದರು.

(8ನೇ ಪುಟ ನೋಡಿ)

ರಾಜ್ಯಮಟ್ಟದ ಬೇಡಿಕೆಗಳಿಗೆ ಒತ್ತಾಯಿಸಿ ಪಂಜಾಬ್‌ನಲ್ಲಿ ಪ್ರತಿಭಟನಾ ಪ್ರದರ್ಶನ

ಸಿ.ಪಿ.ಐ. (ಎಂ) ನ ಪಂಜಾಬ್ ರಾಜ್ಯ ಸಮಿತಿಯ ಕರೆಯಂತೆ ಪಂಜಾಬಿನ ಎಲ್ಲಾ ಕಡೆಗಳಿಂದ ಬಂದಿದ್ದ 10,000 ಮಂದಿ ಸೆಪ್ಟೆಂಬರ್ 8ರಂದು ಪಂಜಾಬ್ ವಿಧಾನ ಸಭೆಯೆದುರು ಬೃಹತ್ ಪ್ರದರ್ಶನ ನಡೆಸಿದರು. ರಾಜ್ಯದ ಜನತೆ ಎದುರಿಸುತ್ತಿರುವ ರಾಜಕೀಯ–ಮತ್ತು ಆರ್ಥಿಕ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ವಿಧಾನ ಸಭೆಯ ಒಳಗೆ ಮತ್ತು ಹೊರಗೆ ಹೋರಾಟ ಪ್ರಾರಂಭಿಸಬೇಕೆಂಬ ಸಿ.ಪಿ.ಐ(ಎಂ) ರಾಜ್ಯ ಸಮಿತಿಯ ತೀರ್ಮಾನಕ್ಕನುಗುಣವಾಗಿ ಈ ಪ್ರದರ್ಶನ ನಡೆಯಿತು.

ಪ್ರದರ್ಶನಕ್ಕೆ ಮೊದಲು ನಡೆದ ಭಾರೀ ಮೆರವಣಿಗೆಯಲ್ಲಿ ಅಸಂಖ್ಯಾತ ಮಹಿಳೆಯರೂ ಭಾಗವಹಿಸಿದ್ದರು. ಕೆಂಬಾವುಟಗಳು, ಬ್ಯಾನರುಗಳಿಂದ ತುಂಬಿ ಹೋಗಿದ್ದ ಚಂಡೀಘಡದಲ್ಲಿ ಪ್ರದರ್ಶನಕಾರರ ಘೋಷಣೆಗಳು ಪ್ರತಿಧ್ವನಿಸುತ್ತಿದ್ದವು. ಮೆರವಣಿಗೆಯ ನೇತೃತ್ವವನ್ನು ಪಕ್ಷದ ರಾಜ್ಯ ಮುಖಂಡರುಗಳು, ವಿಧಾನ ಸಭಾ ಸದಸ್ಯರುಗಳು ವಹಿಸಿದ್ದರು. ಜಲಂಧರ್, ಕಪೂರ್ತಲಾ ಪಾಟಿಯಾಲಾ, ಸಾಂಗ್ರೂರ್, ಲೂಧಿಯಾನ, ಹೋಶಿಯಾರಪುರ, ಗುರುದಾಸಪುರ, ಭಾಟಿಂಡಾ, ಫರೀದ್ ಕೋಟ್, ಫಿರೋಜಪುರ ಮತ್ತು ಅಮೃತ್‌ಸರ ಮುಂತಾದೆಡೆಗಳಿಂದ ಪಾರ್ಟಿ ಕಾರ್ಯಕರ್ತರುಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು.

ಜನತೆಯ ಈ ಶಾಂತಿಯುತ ಮೆರವಣಿಗೆಯನ್ನು ತಡೆಯಲು ಅಶ್ರುವಾಯು ಶೆಲ್, ಬಂದೂಕುಗಳೊಂದಿಗೆ ಪೋಲೀಸ್ ಪಡೆ ಸಿದ್ಧಗೊಂಡಿತು. 144 ಸೆಕ್ಷನ್ ಜಾರಿಯಾಯಿತು. ಆಕ್ರಮಣಕ್ಕೆ ಎಲ್ಲವೂ ಸಿದ್ಧವಾಯಿತು. ಆದರೆ ಪಾರ್ಟಿಯ ಧೀರ ಕಾರ್ಯಕರ್ತರು ಇವ್ಯಾವುದನ್ನೂ ಲೆಕ್ಕಿಸಲಿಲ್ಲ. 144ನೇ ಸೆಕ್ಷನ್ ಮುರಿದು ಘೋಷಣೆಗಳು ತಾರಕಕ್ಕೇರಿದವು. ಕೆರಳಿದ ಪೋಲೀಸರು ಜನತೆಯ ಮೇಲೆ ಮುಗಿಬಿದ್ದರು. ಜನತೆಯ ಮೇಲೆ ಲಾಠಿಗಳು ರುದ್ರನರ್ತನ ಮಾಡಿದವು. 150 ಅಶ್ರುವಾಯು ಶೆಲ್‌ಗಳು ಸ್ಫೋಟಿಸಿದವು. ಗಾಳಿಯಲ್ಲಿ ಗುಂಡುಗಳು ಹಾರಿದವು. ಆದರೆ ಪ್ರದರ್ಶನಕಾರರು ಎದೆಗುಂದಲಿಲ್ಲ. ಸುಮಾರು ಇನ್ನೂರು ಮಂದಿ ಕಾರ್ಯಕರ್ತರು ತೀವ್ರವಾಗಿ ಗಾಯಗೊಂಡರು, ತೊಟ್ಟಿದ್ದ ಬಟ್ಟೆಗಳು ಚಿಂದಿಯಾದವು ಆದರೆ ಆಕ್ರಮಣವನ್ನು ಧೈರ್ಯವಾಗಿ 45 ನಿಮಿಷಗಳ ಕಾಲ ಎದುರಿಸಿದ ಪ್ರದರ್ಶನಕಾರರು ಪೋಲೀಸರ ಕಾವಲನ್ನು ಮುರಿದು ಮುನ್ನಡೆದರು. ಇದರಿಂದ ಅವಮಾನಿತರಾದ ಪೋಲೀಸ್ ಅಧಿಕಾರಿಗಳು ಪ್ರದರ್ಶನದ ಮುಖಂಡರುಗಳನ್ನು ಬಂಧಿಸಲು ಪ್ರಯತ್ನಿಸಿದರು. ಆದರೆ ಸಾವಿರಾರು ಮಂದಿ ಬಂಧಿತರಾಗಲು ಮುಂದೆ ಬಂದಾಗ ಪೋಲೀಸರು ಕೈ ಕೈ ಹಿಸುಕಿಕೊಂಡರು.

ನಂತರ ವಿಧಾನ ಸಭೆಯ ಹೊರಗೆ ಪ್ರದರ್ಶನ ನಡೆಸಿದ ಬಳಿಕ ಪ್ರದರ್ಶನಕಾರರು ಹೊಸ ಹುಮ್ಮಸ್ಸಿನಿಂದ, ಗೆಲುವಿನ ಭಾವದಿಂದ, ಹೋರಾಟವನ್ನು ಮುನ್ನಡೆಸುವ ಸ್ಫೂರ್ತಿಯನ್ನು ಹೊತ್ತು ಚೆದುರಿದರು.

ಪೋಲೀಸರ ಆಕ್ರಮಣದಿಂದ ಗಾಯಗೊಂಡಿರುವವರಲ್ಲಿ ಪಂಜಾಬ್ ರಾಜ್ಯ ಸಿ.ಪಿ.ಐ (ಎಂ) ಕಾರ್ಯಕಾರೀ ಸದಸ್ಯ ಕಾಂ. ಗುರುಚರಣ್ ಸಿಂಗ್ ರಾಂಧವ, ಪಾರ್ಟಿಯ ಎಂ ಎಲ್.ಎ.ಗಳಾದ ಕಾಂ. ಚಾಂದ್ ಸಿಂಗ್ ಚೋಪ್ರ ಕಾಂ ಸರ್ವನ್ ಸಿಂಗ್ ಛೀಮಾ, ಕಾಂ. ದರ್ಶನ್ ಸಿಂಗ್ ಜಬ್ಬಾಲ್ ಅವರುಗಳೂ ಸೇರಿದ್ದಾರೆ.

ವಿಧಾನ ಸಭೆಯ ಹೊರಗೆ ಪ್ರದರ್ಶನ ನಡೆಯುತ್ತಿರುವಾಗಲೇ ಒಳಗೆ ಸಿ.ಪಿ.ಐ(ಎಂ)ನ ಎಲ್.ಎಲ್.ಎ.ಗಳು ಚಂಡೀಘಡದ ಬಗ್ಗೆ, ನದೀ ನೀರಿನ ಹಂಚಿಕೆ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ಆದರೆ ಸಭಾಧ್ಯಕ್ಷರು ಅನುಮತಿ ನೀಡದ ಕಾರಣ ಸಿ.ಪಿ.ಐ (ಎಂ) ಶಾಸಕರು ವಿಧಾನ ಸಭೆಯಿಂದ ಹೊರನಡೆದರು.

ಜನತೆಯ ಎಲ್ಲ ವಿಭಾಗಗಳೂ ಶಾಂತಿಯುತ ಪ್ರದರ್ಶನದ ಮೇಲೆ ನಡೆದ ಪೋಲೀಸ್ ಧಾಳಿಯನ್ನು ಖಂಡಿಸಿವೆ. ಸಿ.ಪಿ.ಐ(ಎಂ) ರಾಜ್ಯ ಸಮಿತಿಯು ತನ್ನ ಹೇಳಿಕೆಯಲ್ಲಿ ಪೋಲೀಸರ ದೌರ್ಜನ್ಯವನ್ನು ಖಂಡಿಸಿ ಇದಕ್ಕೆ ಕಾರಣರಾದ ಪೋಲೀಸ್ ಅಧಿಕಾರಿಗಳ ಮೇಲೆ ತೀವ್ರವಾದ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

...ಪ್ಟಂಬರ್ ೨೮ ರಂದು ಪಶ್ಚಿಮ ಬಂಗಾಲ ಬಂದ್ - ತೀವ್ರ ಸಿದ್ಧತೆ

...ಕೇಂದ್ರ–ರಾಜ್ಯ ಸಂಬಂಧಗಳನ್ನು ...ರ್ರಚಿಸಬೇಕು' 'ರಾಜ್ಯಗಳಿಗೆ ...ದ್ರದಿಂದ ಆಗುತ್ತಿರುವ ಅನ್ಯಾಯ ...ಗೊಳ್ಳಬೇಕು' 'ಎಡರಂಗ ನೀಡಿ... 18 ಅಂಶಗಳ ಬೇಡಿಕೆ ಪಟ್ಟಿ ... ಕೇಂದ್ರವು ಈಡೇರಿಸಬೇಕು' ... ಮೂರು ಮುಖ್ಯ ಘೋಷಣೆ ... ಆಧಾರದಲ್ಲಿ ಸೆಪ್ಟೆಂಬರ್ 28 ... 24 ಗಂಟೆಗಳ ರಾಜ್ಯ ವ್ಯಾಪೀ ...ಕರ ಪಶ್ಚಿಮ ಬಂಗಾಲ ಬಂದ್ ಆಚರಿಸಲು ಪಶ್ಚಿಮ ಬಂಗಾಲದ ಎಡರಂಗ ಸಮಿತಿ ರಾಜ್ಯದ ಜನತೆಗೆ ಕರೆ ನೀಡಿದೆ.

24 ಗಂಟೆಗಳ ಬಂದ್ ಯಶಸ್ವಿಗೊಳಿಸಲು ತೀವ್ರ ಸಿದ್ಧತೆಗಳು ನಡೆಯುತ್ತಿವೆ. ಹೆಚ್ಚು ಸಂಖ್ಯೆಯ ಸಂಘಟಿತ 'ಜನ ಸಮೂಹ ಎಡರಂಗದ ಕರೆಗೆ ಉತ್ಸಾಹದ ಬೆಂಬಲ ನೀಡಿದೆ. ಬಂದ್‌ಗಾಗಿ ನಡೆಯುತ್ತಿರುವ ಸಿದ್ಧತೆಯೇ ಒಂದು ಹೋರಾಟವಾಗಿ ಪರಿಣಮಿಸುತ್ತಿದೆ. ಕಾಂಗ್ರೆಸ್ (ಐ) ಗೂಂಡಾಗಳು ಮತ್ತು ಏಕಸ್ವಾಮ್ಯ ಪತ್ರಿಕೆಗಳು ಬಂದ್‌ನ ವಿರುದ್ಧ ಆಕ್ರಮಣವನ್ನು ಆರಂಭಿಸಿವೆ.

ರಾಜ್ಯಗಳಿಗೆ ಹೆಚ್ಚಿನ ಶಾಸಕಾಂಗ ಆಡಳಿತಾತ್ಮಕ ಹಾಗೂ ಹಣಕಾಸಿನ ಅಧಿಕಾರಗಳು ಇರಬೇಕು, ಕೇಂದ್ರದ ಯೋಜನಾ ಹಾಗೂ ಆರ್ಥಿಕ ತೀರ್ಮಾನಗಳ ಪ್ರಕ್ರಿಯೆಯಲ್ಲಿ ರಾಜ್ಯಗಳು ಒಳಗೊಳ್ಳಬೇಕು, ಸೆಣಬು ಹಾಗೂ ಚಹಾ ತೋಟಗಳನ್ನು ಒಳಗೊಂಡು ಪ್ರಮುಖ ಉದ್ದಿಮೆಗಳು ರಾಷ್ಟ್ರೀಕರಣಗೊಳ್ಳಬೇಕು, 14 ಅಗತ್ಯ ವಸ್ತುಗಳನ್ನು ಸಾರ್ವಜನಿಕ ವಿತರಣಾ ಪದ್ಧತಿಯ ಮೂಲಕ ನಿಶ್ಚಿತ ದರದಲ್ಲಿ ಒದಗಿಸುವ ಭರವಸೆ ಬೇಕು, ಹಣಕಾಸಿನ ಕೊರತೆ ಮತ್ತು ಎಲ್ಲಾ ಸಂಪನ್ಮೂಲಗಳನ್ನು ಕೇಂದ್ರ ಮತ್ತು ರಾಜ್ಯಗಳು ಸಮಾನವಾಗಿ ಹಂಚಿಕೊಳ್ಳಬೇಕು. ರಾಜ್ಯ ಸರ್ಕಾರದ ಹತೋಟಿಯಲ್ಲಿ ಒಂದು ಪ್ರತ್ಯೇಕ ವಾಣಿಜ್ಯ ಬ್ಯಾಂಕ್ ರಚಿಸಿಕೊಳ್ಳುವ ಹಕ್ಕಿಗೆ ಮಾನ್ಯತೆ ನೀಡಬೇಕು ಎಂಬುದು ಎಡರಂಗವು ಕೇಂದ್ರಕ್ಕೆ ಸಲ್ಲಿಸಿರುವ ಬೇಡಿಕೆ ಪಟ್ಟಿಯಲ್ಲಿನ ಪ್ರಮುಖ ಅಂಶಗಳಾಗಿವೆ.

ಮೇಲಿನ ಬೇಡಿಕೆಗಳಿಗಾಗಿ ನಡೆಯುವ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಎಡರಂಗವು ರಾಜ್ಯದ ಎಲ್ಲ ವಿಭಾಗಗಳ ಜನತೆಗೆ, ಬುದ್ಧಿಜೀವಿಗಳಿಗೆ, ಪತ್ರಕರ್ತರಿಗೆ ವಿನಂತಿಸಿಕೊಂಡಿದೆ.

ಪಾಲಿಟ್ ಬ್ಯೂರೋ ಸಭೆ

ಶಾಂತಿಗಾಗಿ ಹೋರಾಟವನ್ನು ತೀವ್ರಗೊಳಿಸಲು ಕರೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪಾಲಿಟ್ ಬ್ಯೂರೋ ದೆಹಲಿಯಲ್ಲಿ ಸೆಪ್ಟಂಬರ್ 3 ಹಾಗೂ 4 ರಂದು ಸಭೆ ಸೇರಿ ನೀಡಿದ ಹೇಳಿಕೆಯ ವಿವರ ಹೀಗಿದೆ:—

ಸೆಪ್ಟೆಂಬರ್ 1ರ ಶಾಂತಿಗಾಗಿ ಹೋರಾಟದ ದಿನವನ್ನು ಯಶಸ್ವಿಯಾಗಿ ಆಚರಿಸಲು ಶ್ರಮಿಸಿದ ಕಾರ್ಮಿಕ ಸಂಘಗಳು ಹಾಗೂ ಇತರ ಸಾಮೂಹಿಕ ಸಂಘಟನೆಗಳು, ರಾಜಕೀಯ ಪಕ್ಷಗಳು ಹಾಗೂ ಶಾಂತಿಚಳವಳಿಯ ಇತರ ಮಿತ್ರರನ್ನು ಸಭೆ ಹಾರ್ದಿಕವಾಗಿ ಅಭಿನಂದಿಸಿದೆ, ಪಶ್ಚಿಮಬಂಗಾಳದ ಕಲ್ಕತ್ತಾ ಹಾಗೂ ಇತರ ಹಳ್ಳಿ-ಪಟ್ಟಣಗಳು, ಕೇರಳ, ಆಂಧ್ರ, ತಮಿಳ್ನಾಡು ಹಾಗೂ ಇತರ ರಾಜ್ಯಗಳಲ್ಲಿ ಭಾರೀ ಮತಪ್ರದರ್ಶನಗಳನ್ನು ನಡೆಸಿ ಯುದ್ಧಕೋರರ ವಿರುದ್ಧ ಯಾವುದಕ್ಕೂ ಜಗ್ಗದ ಹೋರಾಟ ಮಾಡಬೇಕೆಂಬ ದೃಢನಿರ್ಧಾರದಲ್ಲಿ ಭಾರತೀಯ ಜನತೆ ಇತರ ದೇಶಗಳ ತಮ್ಮ ಸೋದರ, ಸೋದರಿಯರಿಗಿಂತ ಹಿಂದಿಲ್ಲ ಎಂದು ತೋರಿಸಿಕೊಟ್ಟಿದ್ದಾರೆ.

ಈ ಹೋರಾಟವನ್ನು ಮುಂದುವರಿಸಬೇಕು. ಬಲಗೊಳಿಸಬೇಕು: ಯಾಕೆಂದರೆ ತಮ್ಮ ದೇಶಗಳಲ್ಲೂ ಸೇರಿದಂತೆ ಜಗತ್ತಿನಾದ್ಯಂತ ಜನರ ಆಕಾಂಕ್ಷೆಯನ್ನು ಧಿಕ್ಕರಿಸಿ ಅಮೇರಿಕಾದ ನೇತೃತ್ವದ ಸಾಮ್ರಾಜ್ಯಶಾಹಿಗಳು ಯುರೋಪಿನಲ್ಲಿ ಪರ್ಷಿಂಗ್ ಹಾಗೂ ಕ್ರೂಇಸ್ ಕ್ಷಿಪಣಿಗಳನ್ನು ನೆಲೆಗೊಳಿಸಲಿದ್ದಾರೆ. ಅದನ್ನು ಪೂರ್ಣವಾಗಿ ನಿರ್ವಹಿಸುವ ಮೊದಲ ಹೆಜ್ಜೆಯಾಗಿ ಬ್ರಿಟನ್ ಹಾಗೂ ಪಶ್ಚಿಮ ಜರ್ಮನಿಯ ಆಳುವ ವಲಯಗಳು ಅಮೇರಿಕನ್ ಯೋಜನೆಗೆ ಬೆಂಬಲ ವ್ಯಕ್ತಪಡಿಸಿವೆ. ಈ ಯೋಜನೆಗಳನ್ನು ಡಿಸೆಂಬರ್ ತಿಂಗಳಲ್ಲಿ ಪೂರ್ಣಗೊಳಿಸಲಿದ್ದು ಆ ಡಿಸೆಂಬರ್ ತಿಂಗಳು ಬಹಳ ಮಹತ್ವದ್ದು. ಆದ್ದರಿಂದ ಶಾಂತಿಹೋರಾಟವನ್ನು ತೀವ್ರಗೊಳಿಸಲು ಪಾಲಿಟ್ ಬ್ಯೂರೋ ನಿರ್ಧರಿಸಿದೆ. ಸೆಪ್ಟೆಂಬರ್ 1ರ ಮತಪ್ರದರ್ಶನ ಇದರ ಆರಂಭ,

ಶಾಂತಿಪ್ರಿಯ ಶಕ್ತಿಗಳು ಹಾಗೂ ಯುದ್ಧಪ್ರಿಯ ಶಕ್ತಿಗಳ ಹೋರಾಟದಲ್ಲಿ ಯುರೋಪು ಪ್ರಮುಖ ರಂಗವಾಗಿರುವುದಾದರೂ ಜಗತ್ತಿನ ಇತರ ಯಾವ ಭಾಗವೂ ಸಾಮ್ರಾಜ್ಯಶಾಹಿಯ ಧಾಳಿಯಿಂದ ಮುಕ್ತವಾಗಿಲ್ಲ. ಮಧ್ಯ ಅಮೇರಿಕಾ, ಕ್ಯಾರೀಬಿಯನ್ ದೇಶಗಳು, ಪಶ್ಚಿಮ ಏಷ್ಯಾ, ದಕ್ಷಿಣ ಆಫ್ರಿಕಾ, ದಕ್ಷಿಣ ಹಾಗೂ ಆಗ್ನೇಯ ಏಷ್ಯಾ—ಇವೆಲ್ಲಾ ಸಾಮ್ರಾಜ್ಯಶಾಹಿಗಳ "ಹಿತಾಸಕ್ತಿಗಳಿಗೆ ಬಹಳ ಮುಖ್ಯವಾದ" ಕ್ಷೇತ್ರಗಳು ಎಂದು ಘೋಷಿಸಲ್ಪಟ್ಟಿವೆ. ಹೆಚ್ಚಿನ ಇಂತಹ ದೇಶಗಳಲ್ಲಿ ಆಳುವ ವಲಯಗಳಿಗೆ ಸಂಪೂರ್ಣವಾಗಿ ಶಸ್ತ್ರಸಜ್ಜಿತಗೊಳ್ಳಲು ಉದಾರ ನೆರವು ನೀಡಲಾಗುತ್ತಿದೆ. ಅದನ್ನು ತಮ್ಮ ದೇಶಗಳ ಪ್ರಜಾಸತ್ತಾತ್ಮಕ ಚಳವಳಿಗಳ ಮೇಲೆ ಶಾಂತಿಪ್ರಿಯ ನೆರೆ ದೇಶಗಳ ಮೇಲೆ ಪ್ರಯೋಗಿಸುವಂತೆ ಮಾಡಲಾಗುತ್ತಿದೆ.

ನಮ್ಮ ದೇಶವೂ ಈ ಧೋರಣೆಯ ಪರಿಣಾಮವನ್ನು ಎದುರಿಸುತ್ತಿದೆ. ಪಾಕಿಸ್ತಾನದ ಸೈನಿಕಶಾಹೀ ಆಳುವ ವೃತ್ತಗಳಿಗೆ ಮಿಲಿಟರಿ ನೆರವು ಹಾಗೂ ಇತರ ನೆರೆ ದೇಶಗಳಲ್ಲಿ ಸಾಮ್ರಾಜ್ಯಶಾಹೀ-ಪರ ತತ್ತ್ವಗಳ ಚಟುವಟಿಕೆಗಳಿಂದ ಇದು ವ್ಯಕ್ತವಾಗುತ್ತಿದೆ.

ಇರಾನ್ ಪ್ರಜಾಪ್ರಭುತ್ವವಾದಿಗಳಿಗೆ ಬೆಂಬಲ

ಇರಾನ್‌ನ ಪ್ರಜಾಪ್ರಭುತ್ವವಾದೀ ಚಳವಳಿಯ ಧೀರ ಹೋರಾಟಗಾರರಿಗೆ ವಿಶೇಷವಾಗಿ ತುದೇ ಪಕ್ಷದ ನಾಯಕರು ಹಾಗೂ ಸದಸ್ಯರಿಗೆ ಪಾಲಿಟ್‌ಬ್ಯೂರೋ ಸೌಹಾರ್ದತೆಯನ್ನು ವ್ಯಕ್ತಪಡಿಸಿದೆ. ತುದೇ ಪಕ್ಷದ ನಾಯಕರು ಹಾಗೂ ಸದಸ್ಯರು ಇರಾನ್‌ನ ಪ್ರತಿಕ್ರಿಯಾವಾದೀ ವಲಯಗಳಿಂದ ಅಮಾನವೀಯ ದಮನ ಎದುರಿಸುತ್ತಿದ್ದಾರೆ. ಬಂಧನಕ್ಕೊಳಗಾಗಿ ಚಿತ್ರಹಿಂಸೆ ಅನುಭವಿಸುತ್ತಿರುವವರಲ್ಲಿ ತುದೇ ಪಕ್ಷದ ಪ್ರಧಾನ ಕಾರ್ಯದರ್ಶಿಯಾದ ಕಾಮ್ರೇಡ್ ನೂರೆದ್ದೀನ್ ಕಿಯಾರೂರಿ ಅವರೂ ಸೇರಿದ್ದಾರೆ. ಇಂತಹ ಚಿತ್ರಹಿಂಸೆಗಳನ್ನು ನಿಲ್ಲಿಸಿ ಪಕ್ಷದ ನಾಯಕನನ್ನು ಹಾಗೂ ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸುವ ಇತರರೊಂದಿಗೆ ಪಾಲಿಟ್ ಬ್ಯೂರೋ ಕೂಡ ದನಿಗೂಡಿಸಿದೆ.

ಪಾಕಿಸ್ತಾನದಲ್ಲಿ ಹೋರಾಟಕ್ಕೆ ಅಭಿನಂದನೆ

ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತದ ವಿರುದ್ಧ ಪ್ರಜಾಪ್ರಭುತ್ವದ ಪುನರ್‌ಸ್ಥಾಪನೆಯ ಆಂದೋಲನದಲ್ಲಿ ಒಟ್ಟು ಸೇರಿದ ಹಲವು ರಾಜಕೀಯ ಪಕ್ಷಗಳ ನೇತೃತ್ವದಲ್ಲಿ ಹೋರಾಡುತ್ತಿರುವ ಪಾಕಿಸ್ತಾನೀ ಜನತೆಗೆ ಪಾಲಿಟ್ ಬ್ಯೂರೋ ಹಾರ್ದಿಕ ಅಭಿನಂದನೆ ಸಲ್ಲಿಸಿದೆ. ಅದರ ಹೋರಾಟ ನೆರೆಕರೆಯ ಎಲ್ಲಾ ದೇಶಗಳ ಜನಸಮೂಹಗಳ ಹೋರಾಟದ ಒಂದು ಭಾಗ ಈ ಎಲ್ಲಾ ದೇಶಗಳು ಅಮೇರಿಕನ್ ಸಾಮ್ರಾಜ್ಯಶಾಹಿಯ ನೆಲೆಗಳಾಗಿ ಮಾರ್ಪಟ್ಟು ತಮ್ಮ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಕಳಕೊಳ್ಳುವ ಅಪಾಯ ಎದುರಿಸುತ್ತಿವೆ.

ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿರುವ ಧೀರ ಹೋರಾಟಗಾರರಿಗೆ ಬೆಂಬಲವಾಗಿ ನಮ್ಮ ದೇಶದಲ್ಲಿ ಸ್ವಯಂಸ್ಫೂರ್ತಿಯಿಂದ ನಡೆಯುತ್ತಿರುವ ಮತಪ್ರದರ್ಶನಗಳಿಂದ ನಾವು, ಭಾರತದ ಜನತೆ, ಪಾಕಿಸ್ತಾನೀ ಜನತೆ ಯಶಸ್ಸುಗಳಿಸಬೇಕೆಂಬುದರಲ್ಲಿ ಆಸಕ್ತಿ ಹೊಂದಿದ್ದೇವೆ ಎಂದು ವ್ಯಕ್ತವಾಗುತ್ತದೆ.

ಸಾಮ್ರಾಜ್ಯಶಾಹೀ ಧೋರಣೆಗಳಿಂದ ನಮ್ಮ ದೇಶದ ಸ್ವಾತಂತ್ರ್ಯ ಹಾಗೂ ಸಾರ್ವಭೌಮತ್ವಕ್ಕೆ ಇರುವ ತೀವ್ರ ಅಪಾಯದ ಅರಿವು ನಮ್ಮ ದೇಶದ ಹಲವು ರಾಜಕೀಯ ಪಕ್ಷಗಳಿಗೆ ಇದ್ದಂತಿಲ್ಲ ಎಂಬುದನ್ನು ಪಾಲಿಟ್ ಬ್ಯೂರೋ ಗಮನಿಸಿದೆ. ಇವು ಶಾಂತಿ ಚಳುವಳಿಯ ಬಗ್ಗೆ ತೀರಾ ಔದಾಸೀನ್ಯದಿಂದ, ಸಿನಿಕತನದಿಂದ ವರ್ತಿಸುತ್ತಿವೆ. ಅವರು ಆಕ್ರಮಣಕಾರೀ ಅಮೇರಿಕಾ ಸಂಯುಕ್ತಸಂಸ್ಥಾನ ಹಾಗೂ ಶಾಂತಿಪ್ರಿಯ ಸೋವಿಯೆತ್ ಸಂಘವನ್ನು ಒಂದೇ ತಕ್ಕಡಿಯಲ್ಲಿಟ್ಟು "ಎರಡು ಸೂಪರ್ ಶಕ್ತಿಗಳು" ಎಂದು ಹೇಳುತ್ತಿವೆ.

ಪಾಕಿಸ್ತಾನದ ಪ್ರಜಾಪ್ರಭುತ್ವವಾದೀ ಚಳವಳಿಗೆ ಸರಕಾರ ಬೆಂಬಲ ನೀಡಿದ್ದನ್ನು "ಪಾಕಿಸ್ತಾನದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ" ಎಂದು ಖಂಡಿಸಿರುವ ಬಿ.ಜೆ.ಪಿ ಹಾಗೂ ಲೋಕದಳದ ಹೇಳಿಕೆ ಸಮಾಜವಾದೀ ಸೋವಿಯತ್ ಸಂಘದ ಬಗ್ಗೆ ದ್ವೇಷ ಹಾಗೂ ಅಮೇರಿಕಾ ಬಗ್ಗೆ ಒಲವನ್ನು ವ್ಯಕ್ತಪಡಿಸುವಲ್ಲಿ ತಾರಕವನ್ನು ತಲುಪಿದೆ. ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಈ ರೀತಿಯ ನಿಲುವಿನಿಂದ ತಮ್ಮನ್ನು ಬೇರ್ಪಡಿಸಿಕೊಂಡಿವೆ ಎಂಬುದರ ಬಗ್ಗೆ ಪಾಲಿಟ್‌ಬ್ಯೂರೋ ಸಂತಸ ವ್ಯಕ್ತಪಡಿಸಿದೆ.

ದಕ್ಷಿಣ ಕೊರಿಯಾ ವಿಮಾನ

ಸೋವಿಯೆಟ್ ವಾಯುಪ್ರದೇಶವನ್ನು ಉಲ್ಲಂಘಿಸಿದ ದಕ್ಷಿಣ ಆಫ್ರಿಕಾದ ವಿಮಾನದ 269 ಪ್ರಯಾಣಿಕರ ಪ್ರಾಣಹಾನಿಯನ್ನು ದೇಶ ಹಾಗೂ ವಿದೇಶಗಳಲ್ಲಿ ಖಂಡಿಸಿದವರೊಡನೆ ಪಾಲಿಟ್‌ಬ್ಯೂರೋ ದನಿಗೂಡಿಸಿದೆ, ಆದರೆ ಈ ದುಃಖದ ಘಟನೆಯನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ಹಾಗೂ ಅದರ ಮಿತ್ರರು ಜಗತ್ತಿನಾದ್ಯಂತ ಸೋವಿಯೆತ್ ವಿರೋಧೀ ಬಡಬಡಿಕೆಯನ್ನು ಬಡಿದೆಬ್ಬಿಸಲು 'ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಪಾಲಿಟ್‌ಬ್ಯೂರೋ ಗಮನಿಸಿದೆ. ದಕ್ಷಿಣ ಕೊರಿಯಾದ ವಿಮಾನವನ್ನು ಅಮೆರಿಕನ್ ವಿಮಾನವೊಂದು ಹಿಂಬಾಲಿಸುತ್ತಿದ್ದು, ಅದು ಸೋವಿಯೆತ್ ಪ್ರದೇಶದಲ್ಲಿ ಬೇಹುಗಾರಿಕೆ ನಡೆಸುತ್ತಿತ್ತೆಂಬುದನ್ನು ಅಧಿಕೃತವಾಗಿ ಒಪ್ಪಲಾಗಿದೆ. ಆದ್ದರಿಂದ ಮಾನವ ಜೀವಗಳ ಈ ದುರಂತಮಯ ನಷ್ಟಕ್ಕೆ ಅಮೇರಿಕಾ ಹಾಗೂ ಅದರ ದಕ್ಷಿಣ ಕೋರಿಯಾದ ಮಿತ್ರರ ಪ್ರಚೋದಕ ಕ್ರಮಗಳೇ ಕಾರಣ ಎಂದು ಸ್ಪಷ್ಟ,

ಯಶಸ್ವಿ ಎನ್.ಸಿ.ಸಿ. ಸಮಾವೇಶ

ರಾಷ್ಟ್ರೀಯ ಆಂದೋಲನ ಸಮಿತಿಯ ಎರಡನೇ ಅಖಿಲ-ಭಾರತ ಸಮಾವೇಶ ಭಾರಿ ಯಶಸ್ಸನ್ನು ಪಡೆಯಲು ಕಾರಣರಾದ ಕಾರ್ಮಿಕರ ಹಾಗೂ ನೌಕರರ ಸಂಘಗಳನ್ನು ಹಾಗೂ ಅಖಿಲ ಭಾರತ ಒಕ್ಕೂಟಗಳನ್ನು ಪಾಲಿಟ್‌ಬ್ಯೂರೋ ಅಭಿನಂದಿಸಿತು. ಸಮಾವೇಶದಲ್ಲಿ ಅಂಗೀಕರಿಸಿದ ಠರಾವುಗಳು ಕಾರ್ಮಿಕವರ್ಗದ ಒಗ್ಗಟ್ಟನ್ನು ಬಲಯುತಗೊಳಿಸುತ್ತದೆ, ಈ ಒಗ್ಗಟ್ಟು ತೀವ್ರಗಾಮಿ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳ ಹೆಚ್ಚು ವ್ಯಾಪಕವಾದ ರಾಜಕೀಯ ಐಕ್ಯತೆಯ ಆಧಾರ. ನ್ಯೂಕ್ಲಿಯರ್ ಯುದ್ಧದ ವಿರುದ್ಧ ಚಳವಳಿಯಲ್ಲಿ ಕಾರ್ಮಿಕರ ಹಾಗೂ ಮಧ್ಯಮ ವರ್ಗ ಭಾಗವಹಿಸುವಂತೆ ಪ್ರಯತ್ನಿಸುವಲ್ಲಿ ಸಮಾವೇಶ ಮುಂದಾಗಿದೆ; ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವ ಆಧಾರದ ಮೇಲೆ ಉತ್ಪಾದನಾ ಯೋಜನೆಗಳನ್ನು ಕೊಡಿಸುವಲ್ಲಿ ಹಾಗೂ ಅದನ್ನು ಜಾರಿಗೊಳಿಸುವಲ್ಲಿ ಕಾರ್ಮಿಕ ವರ್ಗದ ಪಾತ್ರವಿರಬೇಕೆಂದು ಸಮಾವೇಶ ಒತ್ತಾಯಿಸಿದೆ. ಇದು ಹಾಗೂ ಸಮಾವೇಶದ ಇತರ ನಿರ್ಣಯಗಳು ಆಳುವ ವರ್ಗಗಳ ಧೋರಣೆಗಳಿಗೆ ಪರ್ಯಾಯವಾದ ರಾಷ್ಟ್ರೀಯ ಧೋರಣೆಗಳು ರೂಪುಗೊಳ್ಳಲು ನೆರವಾಗುತ್ತವೆ.

ಸಂಘಟಿತ ಕಾರ್ಮಿಕವರ್ಗದಿಂದ ಇಂತಹದೊಂದು ನೇತೃತ್ವ ಆಳುವ ಪಕ್ಷದ ಧೋರಣೆಗಳು ದೇಶವನ್ನು ಗಂಭೀರ ಬಿಕ್ಕಟ್ಟಿನೆಡೆಗೆ ಒಯ್ಯುತಿರುವ ಸಂದರ್ಭದಲ್ಲಿ ಬಂದಿದೆ ಎಂಬುದನ್ನು ಪಾಲಿಟ್‌ಬ್ಯೂರೋ ಗಮನಿಸಿದೆ, ಜೀವನಾವಶ್ಯಕ ಸಾಮಗ್ರಿಗಳ ಬೆಲೆ ಭಯಹುಟ್ಟಿಸುವ ವೇಗದಲ್ಲಿ ಏರುತ್ತಿದೆ. ದೇಶದ ಹಲವು ಭಾಗಗಳಲ್ಲಿನ ಬರ ಹಾಗೂ ನೆರೆ ಪರಿಸ್ಥಿತಿಯಿಂದಾಗಿ ಜನಸಾಮಾನ್ಯರು ಜೀವನ ನಡೆಸುವುದು ದುಸ್ತರವಾಗುತ್ತಿದೆ, ಸರಕಾರ ನೀಡುತ್ತಿರುವ ಪರಿಹಾರ ಅದು ತಲುಪಬೇಕಾದವರಿಗೆ ತಲುಪುತ್ತಿಲ್ಲ. ಈ ಯಾವುದೇ ಸಮಸ್ಯೆಗಳನ್ನು ಎದುರಿಸಲು ಸರಕಾರ ಜನತೆಯ ಸಂಘಟನೆಗಳೊಂದಿಗೆ ಕಾರ್ಮಿಕವರ್ಗ ರೈತಾಪಿ ವರ್ಗ ಹಾಗೂ ಜನಸಾಮಾನ್ಯರ ಇತರ ವಿಭಾಗಗಳನ್ನು ಪ್ರತಿನಿಧಿಸುವ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸದೆ. ಒಂದು ಒಮ್ಮತಕ್ಕೆ ಬರದೆ ಸಾಧ್ಯವಾಗುವುದಿಲ್ಲ.

ರಾಜಕೀಯ ಪರಿಸ್ಥಿತಿ

ದೇಶದ ರಾಜಕೀಯ ಪರಿಸ್ಥಿತಿಯ ವಿಮರ್ಶೆ ನಡೆಸುತ್ತಾ ಪಾಲಿಟ್ ಬ್ಯೂರೋ ಬಿ.ಜೆ.ಪಿ. ಹಾಗೂ ಲೋಕದಳದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕೂಟ ದೇಶದಲ್ಲಿ ಪ್ರಜಾಪ್ರಭುತ್ವದ ಹೋರಾಟವನ್ನು ಬಲಯುತಗೊಳಿಸುವುದಿಲ್ಲ; ಯಾಕೆಂದರೆ ಅದು ಪ್ರತಿಕ್ರಿಯಾವಾದೀ ಶಕ್ತಿಗಳ ಕೂಟ ಎಂದು ಗಮನಿಸಿದೆ. ಆದ್ದರಿಂದ ಅದು ಜನತಾ, ಕಾಂಗ್ರೆಸ್ (ಎಸ್), ಡಿ.ಎಸ್.ಪಿ. ಹಾಗೂ ರಾಷ್ಟ್ರೀಯ ಕಾಂಗ್ರೆಸ್ ಪರಸ್ಪರ ಹತ್ತಿರ ಬರುತ್ತಿರುವುದನ್ನು ಸ್ವಾಗತಿಸಿದೆ. ಈ ಪಕ್ಷಗಳ ನಾಯಕರು ಈಗ ಚರ್ಚಿಸುತ್ತಿರುವ ಸರ್ವಸಾಮಾನ್ಯ ಕಾರ್ಯಕ್ರಮದ ಆಧಾರದ ಮೇಲೆ ಪ್ರಗತಿಶೀಲ ಶಕ್ತಿಗಳನ್ನು ಒಗ್ಗೂಡಿಸುವುದು ಸಾಧ್ಯ. ಸಿ.ಪಿ.ಐ. (ಎಂ) ಹಾಗೂ ಇತರ ಎಡ ಪಕ್ಷಗಳು ಕಾರ್ಮಿಕವರ್ಗ ಹಾಗೂ ಇತರ ದುಡಿಯುವ ಜನತೆಯ ಹೋರಾಟಗಳಿಗೆ ಮತ್ತು ಆಳುವ ಪಕ್ಷದ ವಿರುದ್ಧ ರಾಜಕೀಯ ಹೋರಾಟಗಳಿಗೆ ನೆರವಾಗುವಂತೆ ಈ ನಾಲ್ಕು-ಪಕ್ಷಗಳ ಮಿತ್ರಕೂಟದೊಂದಿಗೆ. ಕಾರ್ಯತಃ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗಬಹುದೆಂದು ಅದು ಆಶಿಸಿದೆ.

ದಿನಾಂಕ 10 ರಿಂದ 16ರವರೆಗೆ ನಡೆಯಲಿರುವ ಪಕ್ಷದ ಕೇಂದ್ರ ಸಮಿತಿಯ ಸಭೆಗೆ ಸಲ್ಲಿಸಬೇಕಾದ ಈ ಮೂರು ದಸ್ತಾವೇಜುಗಳನ್ನು ಪಾಲಿಟ್ ಬ್ಯೂರೋ ಪೂರ್ಣಗೊಳಿಸಿದೆ. (1) ಕಾರ್ಮಿಕ ಸಂಘಗಳ ಐಕ್ಯತೆಯಲ್ಲಿ ಪಕ್ಷದ ಕೆಲಸದ ವಿಮರ್ಶೆ (2) ಕೇಂದ್ರ ಸಮಿತಿಯ ಕಳೆದ ಸಭೆಯ ನಂತರ ನಡೆದ ರಾಜಕೀಯ ಬೆಳವಣಿಗೆಗಳ ಹಾಗೂ ಪಕ್ಷದ ಕೆಲಸದ ವರದಿ ಮತ್ತು (3) ಚೀಣಾಕ್ಕೆ ಭೇಟಿಯಿತ್ತು ಚೀಣಾ ಕಮ್ಯುನಿಸ್ಟ್ ಪಕ್ಷದೊಂದಿಗೆ ಸೋದರ ಸಂಬಂಧಗಳನ್ನು ಪುನಃ ಸ್ಥಾಪಿಸಿದ ಮೂವರು ಸದಸ್ಯರ ಪ್ರತಿನಿಧಿ ಮಂಡಲದ ಬಗ್ಗೆ ವರದಿ.

ವಿಮರ್ಶೆಗೊಳಗಾಗಲಿರುವ ರಾಜಕೀಯ ಬೆಳವಣಿಗೆಗಳಲ್ಲಿ ವಿಜಯವಾಡ ಮತ್ತು ನವದೆಹಲಿಯಲ್ಲಿ ನಡೆದ ವಿರೋಧ ಪಕ್ಷಗಳ ಅಖಿಲ-ಭಾರತ ಸಭೆಗಳು ಹಾಗೂ ಶ್ರೀನಗರದಲ್ಲಿ ಅಕ್ಟೋಬರ್ 4, 5 ರಂದು ನಡೆಯಲಿರುವ ಸಭೆ, ಸರ್ಕಾರಿಯಾ ಆಯೋಗಕ್ಕೆ ಸಿ.ಪಿ.ಐ (ಎಂ) ಪರವಾಗಿ ಸಲ್ಲಿಸಲಿರುವ ಸೂಚನೆಗಳು, ಅಕಾಲಿದಳವೂ ಸೇರಿದಂತೆ ವಿರೋಧ ಪಕ್ಷಗಳ ಒಮ್ಮತಾಭಿಪ್ರಾಯವನ್ನು ಸ್ವೀಕರಿಸಿ ಜಾರಿಗೊಳಿಸಲು ಕೇಂದ್ರ ಸರಕಾರದ ನಕಾರದಿಂದಾಗಿ ಹದಗೆಡುತ್ತಿರುವ ಪಂಜಾಬ್ ಸ್ಥಿತಿ, ಪ್ರತ್ಯೇಕತಾವಾದೀ ಚಳುವಳಿಗಾರರ ಹಠಮಾರಿ ನಿಲುವಿನಿಂದಾಗಿ ಅಸ್ಸಾಂನಲ್ಲಿ ಪರಿಸ್ಥಿತಿ ಮತ್ತಷ್ಟು ಕೆಡುವ ಅಪಾಯ ಮುಂತಾದವುಗಳೆಲ್ಲಾ ಸೇರಿವೆ.

ದಿನಗೂಲಿ ನೌಕರರ ಹೋರಾಟಕ್ಕೆ ಜಯ

(ಕಾಂ. ಸೂರ್ಯನಾರಾಯಣರಾವ್‌ರವರು ವಿಧಾನಸಭೆಯಲ್ಲಿ ಸರಕಾರದಿಂದ ಪಡೆದ ಆಶ್ವಾಸನೆ)

ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯ ದಿನಗೂಲಿ ನೌಕರರ ಸಮಸ್ಯೆಗಳು ಬಹಳ ವರ್ಷಗಳಿಂದ ಬಗೆಹರಿದಿರಲಿಲ್ಲ ಮಾತ್ರವೇ ಅಲ್ಲ, ದಿನದಿನಕ್ಕೂ ಉಲ್ಬಣಿಸುತ್ತಾ ನಡೆದಿದ್ದುವು. ಸುಮಾರು 36,000 ಜನ ನೌಕರರು ನೌಕರಿಯ ಭದ್ರತೆಯಿಲ್ಲದೆ, ಸರಕಾರ ನೀಡಿದ್ದಷ್ಟಕ್ಕೇ ಕೈಯೊಡ್ಡಿ ಬದುಕುತ್ತಾ, ರಜೆ ಮತ್ತಿತರ ಯಾವ ಸೌಲಭ್ಯಗಳೂ ಇಲ್ಲದೆ ದುಡಿಯುತ್ತಾ ಬಂದಿದ್ದಾರೆ.

ಈ ನೌಕರರ ಬೇಡಿಕೆಗಳ ಬಗ್ಗೆ ಹೋರಾಡಲು ರೂಪುಗೊಂಡಿತು ರಾಜ್ಯಮಟ್ಟದ ದಿನಗೂಲಿ ನೌಕರರ ಒಕ್ಕೂಟ. -

ಅದರ ಅಧ್ಯಕ್ಷರು ಕಾಂ॥ ಸೂರ್ಯನಾರಾಯಣರಾವ್‌ರವರು ಮತ್ತು ಪ್ರಧಾನ ಕಾರ್ಯದರ್ಶಿ ಕಾಂ॥ ಆರ್. ಶ್ರೀನಿವಾಸ್ ಈ ಒಕ್ಕೂಟ ರಾಜ್ಯದ ಎಲ್ಲಾ ಕೇಂದ್ರಗಳಲ್ಲಿ ಹಲವಾರು ಮೆರವಣಿಗೆಗಳನ್ನು ನಡೆಸಿ ಸಂಘಟಿಸಿತ್ತು. ರಾಜ್ಯ ಮಟ್ಟದಲ್ಲಿ ಆಗಸ್ಟ್ 16 ದಿನಾಂಕದಿಂದ ವಿಧಾನಸೌಧದ ಬಳಿ ಅನಿರ್ದಿಷ್ಟ ಉಪವಾಸ ಮುಷ್ಕರ ಹೂಡಿದರು.

ಸದನದಲ್ಲಿ ಪ್ರಸ್ತಾಪ

ಈ ಬಗ್ಗೆ ವಿಧಾನ ಸಭೆಯಲ್ಲಿ ಚರ್ಚೆಗೆ ಸೂಚನೆಯಿತ್ತ ಕಾಂ॥ ಸೂರ್ಯನಾರಾಯಣರಾವ್‌ರವರು ಸದನದಲ್ಲಿ 19-8-83 ರಂದು ಪ್ರಸ್ತಾಪಿಸಿ ಸಭೆಯಲ್ಲಿ ಹಾಜರಿದ್ದ ಮಾನ್ಯ ಲೋಕೋಪಯೋಗಿ ಸಚಿವ ಶ್ರೀ ಹೆಚ್. ಡಿ. ದೇವೇಗೌಡರಿಂದ ಖಚಿತ ಭರವಸೆ ಅಪೇಕ್ಷಿಸಿದರು. ಈ ಹೊತ್ತಿಗಾಗಲೇ ಸದನದಲ್ಲಿ ಈ ಹಿಂದೆ ಸಚಿವರು ಪ್ರಶ್ನೆಯೊಂದಕ್ಕೆ ನೀಡಿದ ಉತ್ತರ ಅಸಮಾಧಾನದ ಅಲೆಯನ್ನೆಬ್ಬಿಸಿತ್ತು.

ಸಚಿವ ದೇವೇಗೌಡರು ಉತ್ತರ ನೀಡುತ್ತಾ, ದಿನಗೂಲಿ ನೌಕರರಲ್ಲಿ ಮೂಡಿದ ಅಸಮಾಧಾನ ಮತ್ತಿತರ ವಿವರಗಳನ್ನು ಕಾಂ॥ ಸೂರ್ಯನಾರಾಯಣರಾವ್‌ರವರು ಪ್ರಸ್ತಾಪ ಮಾಡಿದುದನ್ನು ಹೇಳಿ ಈ ಕೆಳಗಿನ ಸ್ಪಷ್ಟೀಕರಣ ನೀಡಿದರು.

ಗ್ಯಾಂಗ್‌ಮನ್‌ಗಳು

ಗ್ಯಾಂಗ್‌ಮನ್‌ಗಳು 14,330 ಜನ ಇದ್ದಾರೆ. ಇವರಲ್ಲಿ 1-4-81 ರಿಂದ 1-4-82ರವರೆಗೆ 240 ದಿನ ಕೆಲಸ ಮಾಡಿದ್ದು 5 ವರ್ಷದಿಂದ ಮೇಲ್ಪಟ್ಟು ನೌಕರಿಯಲ್ಲಿರುವವರನ್ನು ಖಾಯಂಗೊಳಿಸಲಾಗುತ್ತದೆ. ಅವರಲ್ಲಿ ಪರಿಶಿಷ್ಟ ವರ್ಗದವರಿಗೆ 5 ವರ್ಷ ಸೇವೆಯಿಂದ ವಿನಾಯಿತಿ ನೀಡಲಾಗಿದೆ. ಅವರು 1-4-81 ರಿಂದ 1-4-82ರವರೆಗೆ 240 ದಿನ ಸೇವೆ ಸಲ್ಲಿಸಿದ್ದರೆ ಸಾಕು ಅವರನ್ನೂ ಖಾಯಂ ಮಾಡುತ್ತೇವೆ. ಅವರಿಗೆ ಮೀಸಲಾತಿ ನಿಯಮಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿದ್ದರೂ ಕೂಡ ಖಾಯಂ ಮಾಡಲಾಗುವುದೆಂದು ತಿಳಿಸಿದರು.

ಸೌಡಿಗಳು

ಇನ್ನೂ ಸೌಡಿ ಅಥವಾ ಪಟಕರಿಗಳ ವಿಷಯದಲ್ಲಿ ಕೂಡ ಇದೇ ನಿಯಮದ ಪ್ರಕಾರವೇ ಕ್ರಮ ಕೈಗೊಳ್ಳುತ್ತೇವೆ. ಆದರೆ ಈ ಸೌಡಿ ಹುದ್ದೆಗಳು ಎಷ್ಟಿರಬೇಕೆಂಬುದರ ಬಗ್ಗೆ (100 ಎಕರೆ ನೀರಾವರಿ ಪ್ರದೇಶಕ್ಕೆ ಒಬ್ಬರು ಅಥವಾ 50 ಎಕರೆ ನೀರಾವರಿ ಪ್ರದೇಶಕ್ಕೆ ಒಬ್ಬರಿರಬೇಕೆ ಎನ್ನುವುದು. ಇನ್ನೂ ತೀರ್ಮಾನವಾಗಿಲ್ಲ ಹೀಗಾಗಿ ಅದರ ಹುದ್ದೆಗಳು ಇನ್ನೂ ನಿರ್ಮಾಣವಾಗಬೇಕಾಗಿದೆ. ಆ ಬಗ್ಗೆ ಪರಿಶೀಲಿಸಲು ನೀರಾವರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿದೆ. ಅದರ ವರದಿಯ ಆಧಾರದ ಮೇಲೆ ಹುದ್ದೆಗಳಿಗೆ ಮಂಜೂರಾತಿ ನೀಡಿ ಇವರನ್ನು ನೇಮಿಸಿಕೊಳ್ಳುತ್ತೇವೆ. ಈಗ ಇರತಕ್ಕ ಎಲ್ಲಾ ನೌಕರರನ್ನೂ ಖಾಯಂ ಮಾಡಿಕೊಳ್ಳುತ್ತೇವೆ ಇದಕ್ಕೆ ಸರ್ಕಾರದ ಒಪ್ಪಿಗೆ ಇದೆ. ಯಾವ ಸಂಶಯವನ್ನೂ ಇಟ್ಟುಕೊಳ್ಳಬೇಡಿ ಎಂದರು. ಇದರ ನಿಯಮಾವಳಿಗಳೂ ಕೂಡ ಗ್ಯಾಂಗ್‌ಮನ್‌ಗಳ ನಿಯಮಾವಳಿಯಂತೆಯೇ ಇರುತ್ತದೆ ಎಂದು ತಿಳಿಸಿದರು.

ತಾಂತ್ರಿಕ ನೌಕರ ವರ್ಗ

ಇನ್ನು ವಾಹನಚಾಲಕರು ಕ್ಲೀನರ್‌ಗಳು. ವಾಚ್‌ಮನ್‌ಗಳು, ತೋಟಗಾರರು, ಟೆಲಿಫೋನ್ ಆಪರೇಟರ್‌ಗಳು, ಮಿಶನ್‌ಆಪರೇಟರ್ಸ್ ಮತ್ತು ಹೆಲ್ಪರ್ಸ್ ಇತ್ಯಾದಿ ಹುದ್ದೆಗಳಲ್ಲಿರುವವರಿಗೂ ಕೂಡ ಈ ಮೇಲಿನ ಸಂಗತಿ ಅನ್ವಯವಾಗುತ್ತದೆ. ಪ್ರತಿ ಹುದ್ದೆಗಳನ್ನೂ ಬೇರೆ ಬೇರೆಯಾಗಿ ಕೇಡರ್ ಮಾಡಿ ಹುದ್ದೆಗಳನ್ನು ನಿರ್ಮಿಸಿ ಮಂಜೂರಾತಿ ತೆಗೆದುಕೊಳ್ಳಬೇಕಾಗುತ್ತದೆ. ಪ್ರತ್ಯೇಕ ಹುದ್ದೆಗಳನ್ನು ಮಾಡಿ ಕನ್ಸಾಲಿಡೇಟೆಡ್ ಆಗಿ 300 ರೂ.ಗಳನ್ನು ಕೊಡಬೇಕೆಂದಿದ್ದೇವೆ. ಎಲ್ಲರನ್ನೂ ಖಾಯಂಮಾಡುತ್ತೇವೆ. ಯಾರನ್ನೂ ತೆಗೆದುಹಾಕುವುದಿಲ್ಲ ಎಂದು ತಿಳಿಸಿದರು.

ಈಗಾಗಲೇ ಈ ಬಗ್ಗೆ ನೇಮಿಸಿದ ಸಮಿತಿಗೆಗಡುವುಗೊತ್ತುಮಾಡಿದ್ದೇವೆ. ಆ ವರದಿಯನ್ನು 3 ತಿಂಗಳಿನಲ್ಲೋ ಆರು ತಿಂಗಳಿನಲ್ಲೋ ತರಿಸಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆಯಿತ್ತರು. ಈ ಮೇಲಿನ ಮೂರು ವರ್ಗಗಳಲ್ಲಿ 22933 ಜನ ಇದ್ದಾರೆ ಅದರಲ್ಲಿ ಹರಿಜನರು 3874 ಮತ್ತು ಗಿರಿಜನರು 1901. ಹರಿಜನ ಮತ್ತು ಗಿರಿಜನರು ಒಟ್ಟು ಸೇರಿ ಶೇ. 22 ಆಗುತ್ತದೆಂದು ಅಂಕಿ ಅಂಶಗಳನ್ನು ನೀಡಿದರು.

ಅಕ್ಷರಸ್ಥ ನೌಕರ ವರ್ಗದ ಸಮಸ್ಯೆ

ಆದರೆ ಈ ಸರಕಾರಕ್ಕೆ ಅಕ್ಷರಸ್ಥ ನೌಕರರದೇ ಸ್ವಲ್ಪ ಸಮಸ್ಯೆಯಾಗಿದೆಯಂತೆ. ಇವರು ತಮ್ಮ ಅರ್ಹತೆಗಳ ಪ್ರಕಾರ ಸರಕಾರ ನೇಮಕಾತಿ ಮಾಡಿಕೊಳ್ಳುವ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಸ್ಪರ್ಧೆಯಲ್ಲಿ ಭಾಗವಹಿಸಿ ಹುದ್ದೆಗಳನ್ನು ಪಡೆಯಬೇಕು. ಹೈಕೋರ್ಟಿನಲ್ಲಿ ಇವು ಅನೂರ್ಜಿತವಾಗುವ ಸಂಭವವಿರುವುದರಿಂದ ಸರಕಾರದ ನೇಮಕಾತಿ ನಿಯಮಗಳನ್ನೇ ಅನುಸರಿಸಬೇಕಾಗುತ್ತದೆ. ಆದರೆ ಸರಕಾರದ ಹುದ್ದೆಗಳಲ್ಲಿ ಶೇ. 50 ಭಾಗ ಹುದ್ದೆಗಳನ್ನು ಇವರಿಗೂ ಮೀಸಲಾತಿ ಸೌಲಭ್ಯ ನೀಡುತ್ತೇವೆ. ಅಲ್ಲದೆ ಐದು ವರ್ಷಕ್ಕಿಂತ ಮೇಲ್ಪಟ್ಟು ಸೇವೆ ಸಲ್ಲಿಸಿದವರಿಗೆ ಅವರು ಎಷ್ಟು ದಿನ ಕೆಲಸ ಮಾಡಿದ್ದಾರೋ ಅಷ್ಟು ದಿವಸ ವಯಸ್ಸಿನ ಗರಿಷ್ಠ ಮಿತಿಯಲ್ಲಿ ವಿನಾಯಿತಿ ನೀಡುತ್ತೇವೆ. ಇದರಲ್ಲಿ ಮಾನ್ಯ ಸದಸ್ಯರ ಸಹಕಾರ ಬೇಕು ಎಂದರು.

ಸ್ಥಳೀಯ ಅಭ್ಯರ್ಥಿಗಳ ಖಾಯಂ

ಅನೇಕ ಜನ ಅಸಿಸ್ಟೆಂಟ್ ಇಂಜನಿಯರರು, ಜ್ಯೂನಿಯರ್ ಇಂಜನಿಯರರು, ಮೊದಲ, ಎರಡನೇ ದರ್ಜೆ ಗುಮಾಸ್ತರೂ ಬೆರಳಚ್ಚುಗಾರರು, ಲಿಪಿಕಾರರು ಇತ್ಯಾದಿ ಹುದ್ದೆಗಳಲ್ಲಿದ್ದು ಸರಕಾರದ ವೇತನ ಶ್ರೇಣಿಯನ್ನು ಪಡೆದುಕೊಂಡು ವಾರ್ಷಿಕ ಬಡ್ತಿಯನ್ನು ಕೂಡ ಪಡೆದಿರುತ್ತಾರೋ ಅವರೆಲ್ಲರೂ ಸರಕಾರದ ನೇಮಕಾತಿ ನಿಯಮಗಳ ಪ್ರಕಾರ ಉದ್ಯೋಗ ವಿನಿಮಯ ಕೇಂದ್ರದ ಮೂಲಕ ಬರುವುದರಿಂದ ಇವರಿಗೂ ಖಾಯಂ ಮಾಡಲಾಗುತ್ತದೆ ಎಂದರು.

ಕಾಂ॥ ಸೂರಿಯವರ ಒತ್ತಾಯ

ಕಾಂ। ಸೂರಿಯವರು ಮಂತ್ರಿಗಳ ಹೇಳಿಕೆಯ ನಂತರ ಮಾತನಾಡಿ ಈ ನೌಕರರ ಸಮಸ್ಯೆ ಸ್ಟೈಪಂಡರಿ ನೌಕರರ ಸಮಸ್ಯೆಯಂತಲ್ಲ, ಅದು ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಸರಕಾರದ ಸಹಾಯದ ಕಾರ್ಯಕ್ರಮವಾದರೆ, ಇದು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳಲ್ಲಿ ಕೆಲಸದ ಅಗತ್ಯವಿದ್ದುದರಿಂದ ತೆಗೆದುಕೊಂಡಿದ್ದು. ಈ ಇಲಾಖೆ ಬಹಳ ದೊಡ್ಡದು. ಇಲ್ಲಿಯ ಕೆಲಸದ ಅಗತ್ಯಕ್ಕೆ ಹೋಲಿಸಿದರೆ ಹುದ್ದೆಗಳ ಸಂಖ್ಯೆ ಬಹಳ ಕಡಿಮೆ ಇದೆ. ಆದ್ದರಿಂದ ಅಗತ್ಯವಿರುವ ಎಲ್ಲಾ ಹುದ್ದೆಗಳನ್ನೂ ಮಂಜೂರುಮಾಡಿಸಿ ಲೋಕಸೇವಾ ಆಯೋಗದ ಪ್ರಶ್ನೆಯಿಲ್ಲದೇ ಇಲಾಖೆಯಲ್ಲಿಯೇ ಭರ್ತಿ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಹತ್ತಾರು ವರ್ಷಗಳಿಂದ ಇಲ್ಲಿಯೇ ಕೆಲಸಮಾಡಿದವರಿಗೆ ಬಹಳ ತೊಂದರೆಯಾಗುತ್ತದೆ ಎಂದು ಸರಕಾರವನ್ನು ಮತ್ತೊಮ್ಮೆ ಒತ್ತಾಯಿಸಿದರು.

ಮಲಪನಗುಡಿ
ಡಿ. ವೈ. ಎಫ್. ಐ. ನಿಂದ ಮೆರವಣಿಗೆ

ಗ್ರಾಮೀಣ ಪ್ರದೇಶಗಳಲ್ಲಿ ತೀವ್ರವಾಗಿ ಬಾಧಿಸುತ್ತಿರುವ ಪೌರ ಸಮಸ್ಯೆಗಳ ವಿರುದ್ಧ ಡಿ. ವೈ. ಎಫ್. ಐ. ಬಳ್ಳಾರಿ ಜಿಲ್ಲೆಯ ಮಲಪನಗುಡಿ ಘಟಕದ ನೇತೃತ್ವದಲ್ಲಿ ರೈತರು, ಕೃಷಿ ಕಾರ್ಮಿಕರು ಮತ್ತು ಮಹಿಳೆಯರು ಬೃಹತ್ ಮೆರವಣಿಗೆ ನಡೆಸಿದರು. ಮಲಪನಗುಡಿಯಿಂದ ಹೊಸಪೇಟೆಗೆ ಸುಮಾರು 6 ಕಿ. ಮೀ. ದೂರ ಕಾಲ್ನಡಿಗೆಯಲ್ಲಿ ಮೆರವಣಿಗೆ ನಡೆಯಿತು.

ಕೊಂಡನಾಯಕನ ಹಳ್ಳಿಯ ಡಿ. ವೈ. ಎಫ್. ಸದಸ್ಯರಾದ ಕಾ। ಹುಸೇನ್ ಸಾಹೇಬ್ ಅವರ ಕ್ರಾಂತಿ ಗೀತೆಯೊಂದಿಗೆ ಮೆರವಣಿಗೆ ಪ್ರಾರಂಭವಾಯಿತು. ಮಲಪನಗುಡಿ ಗ್ರಾಮ ಪಂಚಾಯತಿಗೆ ಮನವಿಯನ್ನು ಸಲ್ಲಿಸಿ ಮಲಪನಗುಡಿ ಘಟಕದ ಅಧ್ಯಕ್ಷರಾದ ಕಾ। ಪರಶುರಾಮ ಕಲಾಲ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ನಂತರ ಮೆರವಣಿಗೆಯು ಹೊಸಪೇಟೆ ಬಿ. ಡಿ. ಓ. ಮತ್ತು ಎ. ಸಿ. ಆಫೀಸ್‌ಗೆ ತಲುಪಿ ಮನವಿಯನ್ನು ಅರ್ಪಿಸಿತು. ಎ. ಸಿ. ಆಫೀಸಿನ ಮುಂದೆ ಬಹಿರಂಗ ಸಭೆಯನ್ನುದ್ದೇಶಿಸಿ ಜಿಲ್ಲಾ ಸಂಚಾಲಕ ಕಾ। ಜಂಬಯ್ಯ ನಾಯಕ್ ಮಾತನಾಡಿ 15 ದಿನಗಳೊಳಗೆ ಸಮಸ್ಯೆಗಳಿಗೆ ಪರಿಹಾರ ದೊರಕದಿದ್ದಲ್ಲಿ ಹೋರಾಟವನ್ನು ಉಗ್ರ ಸ್ವರೂಪಕ್ಕೆ ಕೊಂಡೊಯ್ಯಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು. ಮಲಪನಗುಡಿಯ ಸಮಸ್ಯೆಯ ಮೇಲೆ ಈ ಹಿಂದೆ ಕೊಟ್ಟ ಮನವಿಯನ್ನು ಕಾ। ಸಿದ್ದಲಿಂಗಪ್ಪ ಅವರು ನೆನಪಿಸಿದರು. (ಮಲಪನಗುಡಿ ಘಟಕದ ಕಾರ್ಯದರ್ಶಿ) ಮೆರವಣಿಗೆಯಲ್ಲಿ ಸುಮಾರು 400 ರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಪೋಲೀಸರೇ ಇಲ್ಲದೆ ಶಾಂತಿಯುತ ಮೆರವಣಿಗೆ ನಗರದ ನಾಗರೀಕರನ್ನು ವಿಶೇಷವಾಗಿ ಆಕರ್ಷಿಸಿತು.

ಶ್ರೀರಾಮಪುರ
ಡಿ.ವೈ.ಎಫ್.ಐ. ಸಭೆ

ಡಿ.ವೈ.ಎಫ್.ಐ. ನೇತೃತ್ವದಲ್ಲಿ 19-9-83ರಂದು ಬೆಂಗಳೂರಿನ ಶ್ರೀರಾಮಪುರದಲ್ಲಿರುವ ಆರ್.ಜಿ.ಐ. ಕಾಲೋನಿಯಿಂದ ಕಾರ್ಪೊರೇಷನ್ ವರೆವಿಗೂ ಮೆರವಣಿಗೆ ತೆಗೆಯಲಾಯಿತು. ಈ ಮೆರವಣಿಗೆಯಲ್ಲಿ ಸುಮಾರು 200ಕ್ಕೂ ಹೆಚ್ಚು ಜನ ಯುವಕರು ಭಾಗವಹಿಸಿದ್ದರು.

ಶ್ರೀರಾಮಪುರದ ಕೊಳಚೆ ಪ್ರದೇಶವಾದ ನೀಲಗಿರಿ ಪಾಪಣ್ಣ ಬಡಾವಣೆಯ ವಾಸಿಗಳು ಸುಮಾರು 50-60 ವರ್ಷಗಳಿಂದ ವಾಸಿಸುತ್ತಿದ್ದರೂ ಅವರು ನೆಲಸಿರುವ ಸೈಟಿಗೆ ಇನ್ನೂ ಖಾತೆದಾರರಾಗಿಲ್ಲ. ಈ ನಿವಾಸಿಗಳನ್ನು ಖಾತೆದಾರರನ್ನಾಗಿ ಮಾಡುವುದು ಮತ್ತು ಅವರು ಮನೆ ಕಟ್ಟಿಸಿಕೊಳ್ಳಲು ಸುಲಭ ಕಂತಿನಲ್ಲಿ ಸಾಲಸೌಲಭ್ಯಗಳನ್ನು ಒದಗಿಸಬೇಕೆಂದು ಬೇಡಿಕೆಗಳಲ್ಲೊಂದು.

ಅಂತೆಯೇ ಈ ಕೊಳಚೆ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸುವುದು, ಭಾಗ್ಯಜ್ಯೋತಿ ಯೋಜನೆಯನ್ವಯ ಪ್ರತಿ ಮನೆಗೂ ವಿದ್ಯುತ್ ದೀಪವನ್ನು ಹಾಕಿಸುವುದು, ಶೌಚಗೃಹಗಳನ್ನು ಕಟ್ಟಿಸಿ ಅವುಗಳನ್ನು ಶುಚಿಯಾಗಿಡುವುದು, ಲೈಬ್ರರಿಯನ್ನ ಪ್ರಾರಂಭಿಸುವುದು, ಹಾಗೂ ಕುಡಿಯುವ ನೀರಿಗಾಗಿ ಹೊಸ ಪೈಪ್‌ಗಳನ್ನು ಹಾಕಿಸಿ ಇಲ್ಲವೆ ಬೋರ್‌ವೆಲ್‌ಗಳನ್ನು ಹಾಕಿಸುವುದು ಇವು ಇತರೆ ಬೇಡಿಕೆಗಳು.

ಈ ಮೇಲ್ಕಂಡ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಕಾರ್ಪೊರೇಷನ್ ಕಮಿಷನರ್ ಹಾಗೂ ಮೇಯರ್‌ರವರಿಗೆ ನೀಡಲಾಯಿತು. ಕಾರ್ಪೊರೇಷನ್ ಕಮೀಷನ್‌ರರವರು ಮನವಿ ಪತ್ರವನ್ನು ಪರಿಶೀಲಿಸಿ ತಾ। 28-9-83ರಂದು ಡಿ.ವೈ.ಎಫ್.ಐ.ನ ಪದಾಧಿಕಾರಿಗಳನ್ನು ಸಮಸ್ಯೆಗಳ ಪರಿಹಾರಕ್ಕಾಗಿ ಮಾತುಕತೆಗೆ ಕರೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಏಜೆನ್ಸಿದಾರರ ಗಮನಕ್ಕೆ

'ಐಕ್ಯರಂಗ' ಹಣಕಾಸಿನ ತೊಂದರೆಯನ್ನೆದುರಿಸುತ್ತಿದೆ. ಪತ್ರಿಕೆಯ ಏಜೆನ್ಸಿದಾರರು ತಮ್ಮ ಬಿಲ್‌ನ ಹಣವನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ. ಅನೇಕ ಏಜೆನ್ಸಿದಾರರು ಹಲವಾರು ತಿಂಗಳುಗಳ ಬಿಲ್ಲಿನ ಹಣವನ್ನು ಪಾವತಿ ಮಾಡಿಲ್ಲ. ಅಂಥವರು ಕೂಡಲೇ ತಮ್ಮ ಬಾಕಿಯನ್ನು ಪಾವತಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ವ್ಯವಸ್ಥಾಪಕ
ಐಕ್ಯರಂಗ

ಕೇಂದ್ರ - ರಾಜ್ಯ ಸಂಬಂಧಗಳ ಪ್ರಶ್ನೆ -

ಸೆಪ್ಟೆಂಬರ್‌ನಲ್ಲಿ ಶ್ರೀನಗರದಲ್ಲಿ ಜರುಗಲಿರುವ ವಿರೋಧ ಪಕ್ಷಗಳ ಸಭೆಯ ಮುಂದೆ ಕೇಂದ್ರ-ರಾಜ್ಯ ಸಂಬಂಧಗಳ ಕುರಿತು ಸಿ. ಪಿ. ಐ. (ಎಂ) ಮಂಡಿಸಲಿರುವ ಸೂಚನೆಗಳು, ಈ ಕೆಳಗಿನಂತಿವೆ.

ಕೇಂದ್ರ ಹಾಗೂ ರಾಜ್ಯಗಳ ನಡುವೆ ಪರಕೀಯ ಭಾವ ಬೆಳೆಯುತ್ತಿರುವ ಸನ್ನಿವೇಶದಲ್ಲಿ ಕೇಂದ್ರ-ರಾಜ್ಯ ಪ್ರಶ್ನೆ ಬಹಳ ಮಹತ್ವ ಪಡೆದಿದೆ.

ರಾಜ್ಯಗಳ ಅಧಿಕಾರಗಳ ಮೇಲೆ ಧಾಳಿ, ಅವುಗಳ ಸವೆತದಿಂದಾಗಿ ಹುಟ್ಟಿದ ಈ ಪರಕೀಯತೆ ಭಾರತದ ವಿಘಟನೆಗಾಗಿ ವಿಚ್ಛಿದ್ರಕಾರೀ ಶಕ್ತಿಗಳು ದಾಳಿ ನಡೆಸುತ್ತಿರುವುದರ ಹಿನ್ನೆಲೆಯಲ್ಲಿ ಇನ್ನಷ್ಟು ಬೆಳೆಯುತ್ತಿದೆ. ಈ ಪರಿಸ್ಥಿತಿ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ, ಪ್ರತ್ಯೇಕತಾವಾದಿಗಳಿಗೆ ನೇರ ಬೆಂಬಲ ಒದಗಿಸಿ ದೇಶದ ಐಕ್ಯತೆಯ ವಿರುದ್ಧ ಪಿತೂರಿ ನಡೆಸಲು ಪ್ರೋತ್ಸಾಹ ನೀಡಿದೆ.

ಆದ್ದರಿಂದ ಭಾರತದ ಐಕ್ಯತೆಗಾಗಿ ಪರಕೀಯತೆ ಬೆಳೆಯುತ್ತಿರುವ ಈ ಪ್ರಕ್ರಿಯೆಯನ್ನು ನಿಲ್ಲಿಸುವುದು ಈಗ ತಕ್ಷಣದ ಅವಶ್ಯಕತೆ.

ದೇಶದ ಐಕ್ಯತೆ

ಆಂತರಿಕ ಐಕ್ಯತೆಯ ಈ ಸಮಸ್ಯೆಯನ್ನು ಭಾರತ ಹೊರಗಿನಿಂದ ಎದುರಿಸಬೇಕಾದ ಸನ್ನಿವೇಶದ ಸಂದರ್ಭದಲ್ಲಿ ಪರಿಹರಿಸಬೇಕಾಗಿದೆ.

ಭಾರತ ಇದುವರೆಗೆ ಕನಿಷ್ಟ ಎರಡು ಯುದ್ಧಗಳನ್ನು ಕಂಡಿದೆ. ಈಗಲೂ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪಾಕಿಸ್ತಾನದ ಆಡಳಿತಗಾರರಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ನೀಡಿ ಭಾರತ ತನ್ನ ರಕ್ಷಣೆಗಾಗಿ ಹೆಚ್ಚು ಸಂಪನ್ಮೂಲಗಳನ್ನು ಮೀಸಲಿಡುವಂತೆ ಮಾಡಿವೆ.

ನಮ್ಮ ಪಕ್ಷ ದೇಶದ ಐಕ್ಯತೆಗೆ ಬದ್ಧವಾಗಿದೆ, ವಿಘಟನೆಯ ಎಲ್ಲಾ ಶಕ್ತಿಗಳ ವಿರುದ್ಧ ಹೋರಾಡುತ್ತದೆ. ಆದ್ದರಿಂದ ನಾವು ಖಂಡಿತವಾಗಿಯೂ ದೇಶವನ್ನು ರಕ್ಷಿಸಬಲ್ಲ, ದೇಶದ ಆರ್ಥಿಕ ಜೀವನವನ್ನು ಸಂಘಟಿಸಿ ಕ್ರೋಢೀಕರಿಸಬಲ್ಲ, ವಿದೇಶಾಂಗ ನೀತಿ, ಸಂಪರ್ಕ, ವಿದೇಶ ವ್ಯಾಪಾರ ಇತ್ಯಾದಿ ತನ್ನ ಕೆಲಸಗಳನ್ನು ನಿರ್ವಹಿಸಲು ಸಾಕಷ್ಟು ಅಧಿಕಾರ ಪಡೆದ ಪರಿಣಾಮಕಾರಿ ಹಾಗೂ ದಕ್ಷ ಕೇಂದ್ರ ಬೇಕೆನ್ನುತ್ತೇವೆ.

ಆದರೆ ದುರದೃಷ್ಟವೇನೆಂದರೆ, ಐಕ್ಯತೆ ಬೇಕೆಂಬ ಜನತೆಯ ಒತ್ತಾಸೆಯನ್ನು, ಬಾಹ್ಯ ಆಕ್ರಮಣದ ವಿರುದ್ಧ ದೇಶವನ್ನು ರಕ್ಷಿಸಬೇಕೆಂಬ ಆಕಾಂಕ್ಷೆಯನ್ನು ಆಳುವ ಪಕ್ಷ ದುರುಪಯೋಗಪಡಿಸಿಕೊಂಡು ಕೇಂದ್ರಕ್ಕೆ ಸರ್ವಾಧಿಕಾರೀ ಶಕ್ತಿಗಳನ್ನು ಪಡಕೊಂಡಿದೆ; ಭಾರತ ಸಂಘದ ಭಾಗಗಳಾದ ರಾಜ್ಯಗಳ ಅಧಿಕಾರಗಳನ್ನು ಪಡಾಪಡಿಸಿ ಮೊಟಕು ಮಾಡಿದೆ. ಶಕ್ತಿಶಾಲಿ ಕೇಂದ್ರವೆಂದರೆ ತಾನು ಹೇಳಿದಂತೆ ಕೇಳುವ ಸರ್ವಾಧಿಕಾರೀ ಕೇಂದ್ರ ಎಂದು ಆಳುವ ಪಕ್ಷ ಭಾವಿಸಿದೆ. 42ನೇ ತಿದ್ದುಪಡಿ ರಾಜ್ಯಗಳನ್ನು ಭಾರತ ಸರಕಾರಕ್ಕೆ ಅಧೀನವಾದ ಸ್ಥಿತಿಗೆ ತಂದುದನ್ನು ನೋಡಿದರೆ ರಾಜ್ಯಗಳ ಅಧಿಕಾರಗಳ ಮೇಲೆ ದಾಳಿ ಮಾಡುವುದು ಸರ್ವಾಧಿಕಾರೀ ಆಳ್ವಿಕೆಗೆ ಅತ್ಯಗತ್ಯ ಎಂದು ಕಾಣುತ್ತದೆ. ಆದ್ದರಿಂದ ಕೇಂದ್ರ-ರಾಜ್ಯ ಸಂಬಂಧಗಳ ಪ್ರಶ್ನೆ ದೇಶದ ಐಕ್ಯತೆಯನ್ನು ರಕ್ಷಿಸುವ ಪ್ರಶ್ನೆ ಮಾತ್ರವಲ್ಲ, ಸರ್ವಾಧಿಕಾರದ ಶಕ್ತಿಗಳು ಹಾಗೂ ಪ್ರಜಾಪ್ರಭುತ್ವದ ಶಕ್ತಿಗಳ ನಡುವೆ ಹೋರಾಟದ ಒಂದು ಪ್ರಶ್ನೆಯೂ ಆಗಿದೆ.

ಕೇಂದ್ರದ ಪ್ರಾಬಲ್ಯ

ಇದೇನು ಆಕಸ್ಮಿಕವಲ್ಲ. ಸ್ವಾತಂತ್ರ್ಯ ನಂತರ ರಚನೆಗೊಂಡ ಸಂವಿಧಾನದಲ್ಲೇ ಕೇಂದ್ರದ ಮೇಲಧಿಕಾರದ ಮೂಲಗಳಿವೆ. ಯಾಕೆಂದರೆ ಅದು ರಚಿತವಾದದ್ದು ಬಂಡವಾಳಶಾಹೀ ಪಥಕ್ಕಾಗಿ. ಬಂಡವಾಳ ಶಾಹೀ ಅಭಿವೃದ್ಧಿಗಾಗಿ ಅದಕ್ಕೆ ಭಾರತ ಒಂದು ಸಂಯುಕ್ತ ಏಕರೂಪದ ಮಾರುಕಟ್ಟೆಯಾಗಿ ಬೇಕಾಗಿತ್ತು. ದೊಡ್ಡ ಬಂಡವಾಳ ಶಾಹಿಗಳ ಮತ್ತು ಭೂಮಾಲಿಕರ ಅಗತ್ಯಗಳಿಗನುಗುಣವಾಗಿ ಅದು ರಚನೆಗೊಂಡಿತ್ತು. ಇವರು ಪ್ರಜಾಪ್ರಭುತ್ವದ ಬೇಡಿಕೆ, ರಾಜ್ಯಗಳಿಗೆ ಹೆಚ್ಚಿನ ಅಧಿಕಾರ, ಎಲ್ಲಾ ಭಾಷೆಗಳ ಸಮಾನತೆ ಮುಂತಾದುವೆಲ್ಲಾ ತಮ್ಮ ಆರ್ಥಿಕ ಬೆಳವಣಿಗೆ ಹಾಗೂ ರಾಜಕೀಯ ಅಧಿಕಾರಕ್ಕೆ ಅಡ್ಡಿಯೆಂದು ಭಾವಿಸಿದ್ದರು.

ಈ ಬಗ್ಗೆ ನಮ್ಮ ಪಕ್ಷದ 'ಕಾರ್ಯಕ್ರಮ' ಹೀಗನ್ನುತ್ತದೆ–"ಇಂತಹ ಸನ್ನಿವೇಶದಲ್ಲಿ ಕೇಂದ್ರ ಸರಕಾರ ಹಾಗೂ ರಾಜ್ಯಗಳ ನಡುವೆ ವೈರುಧ್ಯ ಹೆಚ್ಚಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಈ ವೈರುಧ್ಯಗಳ ಹಿಂದೆ ಹಿರಿಬೂರ್ಜ್ವಾ ಹಾಗೂ ರಾಜ್ಯಗಳ ಬೂರ್ಜ್ವಾ ವರ್ಗಗಳೂ ಸೇರಿದಂತೆ ಸಮಸ್ತ ಜನತೆಯ ನಡುವಿನ ಹೆಚ್ಚು ಆಳವಾದ ವೈರುಧ್ಯ ಅಡಗಿದೆ. ಬಂಡವಾಳ ಶಾಹಿಯಲ್ಲಿ ಅಸಮ ಬೆಳವಣಿಗೆ ಇನ್ನಷ್ಟು ವಿಷಮಗೊಳ್ಳುವುದರಿಂದ ಈ ವೈರುಧ್ಯ ಸತತವಾಗಿ ತೀವ್ರಗೊಳ್ಳುತ್ತಿರುತ್ತದೆ."

ಕೇಂದ್ರದ ಪಟ್ಟಭದ್ರ ಹಿತಾಸಕ್ತಿಗಳ ಪರವಾದ ಧೋರಣೆಗಳ ಆರ್ಥಿಕ ಬಿಕ್ಕಟ್ಟು ಜನಸಾಮಾನ್ಯರ ಬಡತನ ಹೆಚ್ಚುತ್ತಿರುವುದರ ಫಲವಾಗಿ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ, ರಾಜ್ಯ ಅಧಿಕಾರಗಳ ಮೇಲೆ ಹೆಚ್ಚೆಚ್ಚಾಗಿ ದಾಳಿ ನಡೆಯುತ್ತಿದೆ.

ಈ ಪ್ರಕ್ರಿಯೆಯೊಂದಿಗೇ ಕೇಂದ್ರದ ಮೇಲೆ ರಾಜ್ಯಗಳ ಹೀನ ರೀತಿಯ ಅವಲಂಬನೆ ಬೆಳೆಯಿತು. ರಾಜ್ಯಗಳು ಸಾರ್ವಜನಿಕವಾಗಿ ಎತ್ತಬೇಕಾದ ಸಾಲದ ಮೊತ್ತವನ್ನು ಕೇಂದ್ರವೇ ನಿರ್ಧರಿಸುತ್ತದೆ; ಬ್ಯಾಂಕುಗಳಿಂದ ದೊರೆಯುವ ಸಾಲ ಋಣದ ಮೇಲೂ ಅದರದೇ ಏಕಸ್ವಾಮ್ಯ–ರಾಜ್ಯಗಳು ಅದುಮಾಡುವ ತಾತ್ಕಾಲಿಕಸಹಾಯದ ಮೇಲೇನೇ ಅವಲಂಬಿಸಿರಬೇಕು. ಇವುಗಳೊಂದಿಗೇ ರಾಜ್ಯಗಳ ಯೋಜನೆಯ ಗಾತ್ರವನ್ನು ನಿರ್ಧರಿಸುವ ವಿಧಾನ ರಾಜ್ಯಗಳ ಯೋಜನಾ ಕ್ರಮವನ್ನು ಕೇಂದ್ರ ಯೋಜನೆಯ ಬಾಲದ ಮಟ್ಟಕ್ಕೆ ಇಳಿಸಿಬಿಟ್ಟು ರಾಜ್ಯಗಳಲ್ಲಿ ಯೋಜನೆ ಕೇವಲ ಅಣಕವಾಗಿದೆ; ಕೇಂದ್ರ ಯೋಜನೆಗಳ ಮೇಲೆ ಪ್ರಾಬಲ್ಯ ಹೊಂದಿರುವ ದೊಡ್ಡ ವ್ಯವಹಾರಸ್ಥರ ಅಗತ್ಯಗಳು ಹಾಗೂ ಸೌಕರ್ಯಕ್ಕನುಗುಣವಾಗಿ ಅದನ್ನು ಹೆಚ್ಚು ಕಡಿಮೆ ಮಾಡಬಹುದು. ರಾಜ್ಯಗಳಲ್ಲಿ ಯೋಜನೆ ರಾಜ್ಯಗಳ ಜನತೆಯ ಅಗತ್ಯಕ್ಕನುಗುಣವಾಗಿ ಇಲ್ಲ; ಅಖಿಲ ಭಾರತ ಅಭಿವೃದ್ಧಿಯ ಪ್ರಾಮಾಣಿಕ ಅಗತ್ಯಕ್ಕನುಗುಣವಾಗಿಯೂ ಇಲ್ಲ.

ವಿಪರೀತ ಕೇಂದ್ರೀಕರಣ

ಕಳೆದ ಹಲವು ವರ್ಷಗಳಲ್ಲಿ ರಾಜಕೀಯ ಹಾಗೂ ಆರ್ಥಿಕ ಅಧಿಕಾರ ಈ ರೀತಿ ಕೇಂದ್ರದಲ್ಲಿ ಮಡುಗಟ್ಟಿ ನಿಂತಿದೆ. ಆ ಮೂಲಕ ಸಂವಿಧಾನದಲ್ಲಿದ್ದ ಅಲ್ಪಸ್ವಲ್ಪ ಒಕ್ಕೂಟ (ಫೆಡರಲ್) ತತ್ವಗಳೂ ಸವೆದು ಹೋಗಿವೆ. ತುರ್ತು ಪರಿಸ್ಥಿತಿಯಲ್ಲಿ 42ನೇ ತಿದ್ದುಪಡಿಯೊಂದಿಗೆ ಈ ಪ್ರಕ್ರಿಯೆ ತಾರಕವನ್ನು ತಲುಪಿತು. ಈ ತಿದ್ದುಪಡಿಯಲ್ಲಿ ರಾಜ್ಯದ ಒಪ್ಪಿಗೆಯಲ್ಲಿ ರಾಜ್ಯಗಳಿಗೆ ಕೇಂದ್ರ ಮೀಸಲು ಪೋಲೀಸನ್ನು ಕಳಿಸಲು ಅವಕಾಶವಿದೆ; ಹೀಗೆ ಕಳಿಸಿದ ಪಡೆಗಳು ಕೇವಲ ಕೇಂದ್ರ ಸರಕಾರದ ಆಜ್ಞೆಗೆ ಬದ್ಧರಾಗಿದ್ದಾರೆ. ವಿಪರೀತ ಕೇಂದ್ರೀಕರಣದ ಪ್ರಕ್ರಿಯೆಯನ್ನು ಇದು ಸಾರಭೂತವಾಗಿ ವ್ಯಕ್ತಪಡಿಸುತ್ತದೆ.

ದೇಶದ ಯಾವುದೇ ಭಾಗದಲ್ಲಿ ಏಳುವ ಯಾವುದೇ ಸಮಸ್ಯೆಯ ಮಧ್ಯ ಪ್ರವೇಶಿಸಲು ಸಾಕಷ್ಟು ಅಧಿಕಾರಗಳನ್ನು ಸಂವಿಧಾನ ಕೇಂದ್ರ ಸರಕಾರಕ್ಕೆ ನೀಡಿದೆ. ಇದರೊಂದಿಗೆ ಕಳೆದ 30 ವರ್ಷಗಳಲ್ಲಿ ಏಕ ಪಕ್ಷದ ಆಡಳಿತದಿಂದಾಗಿ ಪಡಕೊಂಡ ಅಧಿಕಾರಗಳೂ ಇವೆ. ರಾಜ್ಯಪಾಲರ ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡು ಆಳುವ ಪಕ್ಷದ ಅಲ್ಪ ಸಂಖ್ಯಾತ ಮಂತ್ರಿ ಮಂಡಳಗಳನ್ನು ಅಧಿಕಾರದಲ್ಲಿ ಕುಳ್ಳಿರಿಸಿ ಮತದಾರರ ತೀರ್ಪನ್ನು ವ್ಯರ್ಥಗೊಳಿಸಲಾಯಿತು.

ಇದೇ ರೀತಿ ಜನತೆಯ ಹಿತಾಸಕ್ತಿಗಳಿಗನುಗುಣವಾಗಿ ರಾಜ್ಯಗಳ ವಿಧಾನ ಮಂಡಲಗಳು ಅಂಗೀಕರಿಸಿದ ಪ್ರಗತಿಶೀಲ ಶಾಸನಗಳಿಗೆ ರಾಷ್ಟ್ರಪತಿಗಳ ಒಪ್ಪಿಗೆಯನ್ನು ತಡೆಹಿಡಿದು ಅವನ್ನು ಬುಡಮೇಲುಗೊಳಿಸುವಲ್ಲಿ ಕೇಂದ್ರ ಸರಕಾರ ಯಶಸ್ವಿಯಾಗಿದೆ. ಪಶ್ಚಿಮ ಬಂಗಾಲದ ಎಡರಂಗ ಸರಕಾರದ ಭೂ ಸಂಬಂಧೀ ಶಾಸನವನ್ನು ವಿಧಾನ ಸಭೆ ಅಂಗೀಕರಿಸಿ ತಿಂಗಳುಗಳೇ ಕಳೆದರೂ ಅದಕ್ಕಿನ್ನೂ ರಾಷ್ಟ್ರಪತಿಗಳ ಸಮ್ಮತಿ ದೊರೆತಿಲ್ಲ. ಈ ಹಿಂದಿನ ಎಡರಂಗ ಮಂತ್ರಿ ಮಂಡಲ ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳ ಮಾನ್ಯತೆಯ ಕ್ರಮವನ್ನು ಇದೇ ವಿಧಾನದಿಂದ ಸಂಹರಿಸಲಾಗಿದೆ. ಕೇರಳದ ಎಡ-ಪ್ರಜಾಪ್ರಭುತ್ವ ರಂಗದ ಕ್ರಮವೊಂದರದ್ದು ಇದೇ ಗತಿ. ತಮಿಳುನಾಡು ವಿಧಾನ ಮಂಡಲ ಅಂಗೀಕರಿಸಿದ ಒಂದು ಮಸೂದೆಗೆ ಸಮ್ಮತಿಯನ್ನು ಕೊಟ್ಟಿಲ್ಲ.

ಸಮಾನತೆ ಮತ್ತು ಸ್ವಾಯತ್ತತೆ

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಚಟುವಟಿಕೆಗಳ ಸಂಯೋಜನೆಯ ರಾಜಕೀಯ ಪ್ರಕ್ರಿಯೆಯಿಲ್ಲದೆ ಭಾರತದ ಐಕ್ಯತೆ, ಪ್ರಜಾಪ್ರಭುತ್ವದ ರಕ್ಷಣೆ, ಯೋಜಿತ ಆರ್ಥಿಕ ಬೆಳವಣಿಗೆಯ ಸಂಯೋಜನೆ ಇತ್ಯಾದಿ ಆಧಾರಭೂತ ಕಾರ್ಯಭಾರಗಳನ್ನು ಸಾಧಿಸುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟ. ಆದ್ದರಿಂದಲೇ ನಮ್ಮ ಪಕ್ಷ ನಿಜವಾದ ಸಮಾನತೆ ಹಾಗೂ ರಾಜ್ಯಗಳಿಗೆ ಸ್ವಾಯತ್ತತೆ ಬೇಕೆಂದು ಸೂಚಿಸುತ್ತದೆ. ರಾಜ್ಯವಲಯದಲ್ಲಿ ಈ ರೀತಿಯ ಸಮಾನತೆಯ ಹಾಗೂ ಸ್ವಾಯತ್ತತೆಯ ಭಾವವಿಲ್ಲದಿದ್ದರೆ ಭಾರತದ ಐಕ್ಯತೆ ಬಲಗೊಳ್ಳುವುದಿಲ್ಲ; ನಾವು ಒಂದು ಜನ, ಒಂದುದೇಶ ಎಂಬ ಭಾವನೆ ದುರ್ಬಲಗೊಳ್ಳುತ್ತದೆ. ವಿಚ್ಛಿದ್ರಕಾರೀ ಶಕ್ತಿಗಳ ದಾಳಿಗಳ ವಿರುದ್ಧ ಬೇಕಾಗಿರುವುದು ಐಕ್ಯತೆಯ ಒಂದು ಶಕ್ತಿಶಾಲೀ ಪ್ರಜ್ಞೆ. ಈ ಅವಶ್ಯಕತೆಯನ್ನು ಪೂರೈಸುವಲ್ಲಿ ರಾಜ್ಯಗಳ ಸ್ವಾಯತ್ತತೆ ಬಹಳಷ್ಟು ಸಹಾಯಕವಾಗುತ್ತದೆ. ತಮ್ಮನ್ನು ಚುನಾಯಿಸಿದ ಜನರ ಆಶೋತ್ತರ ಹಾಗೂ ಆಜ್ಞೆಗಳನ್ನು ಪೂರೈಸಲು ರಾಜ್ಯ ವಿಧಾನ ಮಂಡಲಗಳಿಗೆ ಹಾಗೂ ಸರಕಾರಗಳಿಗೆ ಸಾಕಷ್ಟು ಸ್ವಾತಂತ್ರ್ಯ ಹಾಗೂ ಅಧಿಕಾರ ಇರಬೇಕು. ಇದನ್ನು ನಿರಾಕರಿಸಿದರೆ ಒಕ್ಕೂಟದ ಅಂಗ ಘಟಕಗಳನ್ನು ಅವಲಂಬಿತ ಘಟಕಗಳ ಮಟ್ಟಕ್ಕಿಳಿಸಿ ಭಾರತೀಯ ಪ್ರಜಾಪ್ರಭುತ್ವದ ಒಂದು ಕೈಯನ್ನು ಕಡಿದು ಹಾಕಿದಂತೆಯೇ.

ಈ ಪ್ರಶ್ನೆಯ ಪರಿಹಾರವೊಂದೇ ಭಾರತೀಯ ಜನತೆಯ ಸಮಸ್ಯೆಗಳನ್ನು ಪರಿಹರಿಸುತ್ತದೆಯೆಂದು ನಮ್ಮ ಪಕ್ಷ ನಂಬಿಲ್ಲ. ಹಾಗಾಗಬೇಕಾದರೆ ಸಮಾಜದ ಮೂಲಭೂತ ರಚನೆಯೇ ಬದಲಾಗಬೇಕು. ಆದರೆ ರಾಜ್ಯಗಳ ಸ್ವಾಯತ್ತ ಅಧಿಕಾರಗಳನ್ನು ಸಜ್ಜಿತಗೊಳಿಸಿದರೆ, ಕೇಂದ್ರ ಹಾಗೂ ಆಳುವ ಪಕ್ಷದ ಸರ್ವಾಧಿಕಾರೀ ಹಿಡಿತ ಸಡಿಲಗೊಳಿಸಿದರೆ, ಅದರಿಂದ ರಾಜ್ಯಗಳೆ ಹಾಗೂ ಕೇಂದ್ರದಲ್ಲಿನ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತದ ವಿರುದ್ಧ ಹೋರಾಡಲು ಸಹಾಯಕವಾಗುತ್ತದೆ.

ಇಂದು ಕೇಂದ್ರದಲ್ಲಾಳುವ ಪಕ್ಷ, ಹಲವು ರಾಜ್ಯಗಳಲ್ಲಿ ಆಳುವ ಪಕ್ಷವಲ್ಲ ಆದ್ದರಿಂದ ಕೇಂದ್ರ ರಾಜ್ಯಗಳ ನಡುವೆ ಅಧಿಕಾರಗಳ ಪುನರ್ವಿತರಣೆಯ ಪ್ರಶ್ನೆ ಇನ್ನಷ್ಟು ಶೀಘ್ರವಾಗಿ ಪರಿಹಾರವಾಗಬೇಕಾಗಿದೆ. ಸಾಮೂಹಿಕ ಒತ್ತಡವಿಲ್ಲದೆ ಈ ಸಮಸ್ಯೆಗೆ ಸುಲಭ ಪರಿಹಾರ ದೊರೆಯಲಾರದು. ಏಕೆಂದರೆ ಸರಿಯಾದ ಪರಿಹಾರ ದೊರೆಯಬೇಕಾದರೆ ಆಳುವ ಪಕ್ಷ ಅಧಿಕಾರಗಳಲ್ಲಿ ತುಂಬಾ ಕಡಿತಗೊಳ್ಳಬೇಕಾಗುತ್ತದೆ ಅದಕ್ಕೆ ಆಳುವ ಪಕ್ಷ ಸುಲಭವಾಗಿ ಒಪ್ಪಲಾರದು.

ಪಕ್ಷದ ಸೂಚನೆಗಳು

ಹೀಗೆ ಒಂದು ಪರಿಣಾಮಕಾರೀ ಕೇಂದ್ರದ ಅಗತ್ಯ ಮತ್ತು ಜತೆಗೆ ಭಾರತದ ಐಕ್ಯತೆ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಲು ರಾಜ್ಯಗಳ ಅಧಿಕಾರಗಳನ್ನು ವಿಸ್ತರಿಸಬೇಕಾದ ತುರ್ತು ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ನಾವು ಈ ಕೆಳಗಿನ ಸೂಚನೆಗಳನ್ನು ಮಂಡಿಸುತ್ತೇವೆ.

1 ರಾಜ್ಯಗಳ ಸ್ವಾಯತ್ತತೆಯನ್ನು ರಕ್ಷಿಸಲು ಸಂವಿಧಾನದ 248ನೇ ವಿಧಿಯನ್ನು ತಿದ್ದುಪಡಿಗೊಳಿಸಿ ಕೇಂದ್ರ ಹಾಗೂ ಸಮವರ್ತಿ ಪಟ್ಟಿಗೆ ಸೇರಿರದ ಯಾವುದೇ ವಿಷಯದ ಬಗ್ಗೆ ಶಾಸನ ಮಾಡಲು ರಾಜ್ಯದ ವಿಧಾನಮಂಡಲಕ್ಕೆ ಮಾತ್ರ ಸಂಪೂರ್ಣ ಅಧಿಕಾರವಿರಬೇಕು. ಈಗಿರುವಂತೆ ಆ ಹಕ್ಕನ್ನು ಸಂಸತ್ತಿಗೇ ಮೀಸಲಿಡಬಾರದು. ಬೇರೆ ಮಾತಲ್ಲಿ ಹೇಳುವುದಾದರೆ, ಒಕ್ಕೂಟದ ಬಾಕೀ ಅಧಿಕಾರಗಳು ರಾಜ್ಯಗಳಲ್ಲಿರಬೇಕು, ಕೇಂದ್ರದಲ್ಲಲ್ಲ. ರಾಜ್ಯಗಳು ತಮ್ಮ ವಲಯಗಳಲ್ಲಿ ತಮ್ಮ ಪೂರ್ಣ ಹಕ್ಕುಗಳನ್ನು ಚಲಾಯಿಸುವಾಗ ಕೇಂದ್ರ ಸರಕಾರಕ್ಕೆ ವಹಿಸಿದ ವಲಯಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು. ಅತೀ ರೀತಿ ಕೇಂದ್ರವೂ ಕೂಡ ರಾಜ್ಯಗಳ ಶಾಸಕೀಯ ಅಥವಾ ಕಾರ್ಯಾಂಗದ ವಲಯಗಳಲ್ಲಿ ಮಧ್ಯ ಪ್ರವೇಶಿಸಬಾರದು. ರಾಷ್ಟ್ರೀಯ ಹಿತಾಸಕ್ತಿಗಳ ನೆವದಲ್ಲಿ ರಾಜ್ಯ ಪಟ್ಟಿಯಲ್ಲಿರುವ ವಿಷಯದ ಬಗ್ಗೆ ಶಾಸನ ರಚಿಸಲು ಕೇಂದ್ರಕ್ಕೆ 249 ನೇ ವಿಧಿ ಇತ್ತಿರುವ ಅಧಿಕಾರವನ್ನು ರದ್ದುಗೊಳಿಸಬೇಕು.

2 ರಾಜ್ಯಗಳ ವಲಯದ ಅಧಿಕಾರಗಳನ್ನು ವ್ಯಾಪಕಗೊಳಿಸುವ ಸಂದರ್ಭದಲ್ಲೆ ಕೇಂದ್ರ ಮಾತ್ರ ನಿರ್ವಹಿಸಬಹುದಾದ, ಉದಾಹರಣೆಗೆ, ರಕ್ಷಣೆ, ವಿದೇಶ ವ್ಯಾಪಾರವೂ ಸೇರಿದಂತೆ ವಿದೇಶಾಂಗ ವ್ಯವಹಾರಗಳು, ನಾಣ್ಯ, ಸಂಪರ್ಕ ಹಾಗೂ ಆರ್ಥಿಕ ಸಂಯೋಜನೆ ಮುಂತಾದವುಗಳ ಅಧಿಕಾರಗಳನ್ನು ಕಾದಿಟ್ಟು ಅವನ್ನು ಬಲಪಡಿಸಬೇಕು ಯೋಜನೆ, ಬೆಲೆ ಹಾಗೂ ಕೂಲಿ ನಿಗದಿ ಇತ್ಯಾದಿ ಕ್ಷೇತ್ರಗಳಲ್ಲಿ ಸಂಯೋಜನೆ ಮಾತ್ರವಲ್ಲ ಸಾಮಾನ್ಯ ನಿರ್ದೇಶನಗಳನ್ನು ಕೇಂದ್ರ ನೀಡಬೇಕು. ಯೋಜನೆ ಹಾಗೂ ಆರ್ಥಿಕ ಸಂಯೋಜನೆಗಳಲ್ಲಿ ಮಾತ್ರ ಕೇಂದ್ರ ಸರಕಾರ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಮಾರ್ಗದರ್ಶಕ ಸೂತ್ರಗಳ ಪ್ರಕಾರವೇ ಕಾರ್ಯ ನಿರ್ವಹಿಸಬೇಕು. ಈ ಮಂಡಳಿಯಲ್ಲಿ ಕೇಂದ್ರದೊಂದಿಗೆ ರಾಜ್ಯಗಳ ಪ್ರತಿನಿಧಿತ್ವ ಇರಬೇಕು. ಈಗ ಈ ಮಂಡಳಿಯನ್ನಾಗಲೀ, ಯೋಜನಾ ಆಯೋಗವನ್ನಾಗಲೀ ಸಂವಿಧಾನದಲ್ಲಿ

ಸಿ.ಪಿ.ಐ. (ಎಂ) ಸೂಚನೆಗಳು

ನಿರ್ದಿಷ್ಟವಾಗಿ ಸೂಚಿಸಿಲ್ಲ. ಒಂದು ಪ್ರತ್ಯೇಕ ವಿಧಿಯನ್ನು ಸೇರಿಸಿ ಈ ಕೊರತೆಯನ್ನು ನಿವಾರಿಸಬೇಕು. ಯೋಜನಾ ಆಯೋಗದ ಸದಸ್ಯತ್ವವನ್ನು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ನಿರ್ಧರಿಸುವುದೆಂದು ಇದರಲ್ಲಿ ಸ್ಪಷ್ಟವಾಗಿ ಸೇರಿಸಬೇಕು. ಈಗ ಅಭಿವೃದ್ಧಿ ಉದ್ದೇಶಗಳಿಗಾಗಿ ಸಾಲದ ಹಾಗೂ ನೆರವು ಧನ ನೀಡುವ ಅಧಿಕಾರ ಯೋಜನಾ ಆಯೋಗಕ್ಕೆ ಮಾತ್ರ ಇದೆ. ಆದ್ದರಿಂದ ಆಯೋಗದ ಕಾರ್ಯನಿರ್ವಹಣೆಯಲ್ಲಿ ರಾಜ್ಯಗಳ ಪಾತ್ರವಿರುವುದು ಅಗತ್ಯ.

3. ಒಂದಕ್ಕಿಂತ ಹೆಚ್ಚು ರಾಜ್ಯಗಳಿಗೆ ಸಂಬಂಧಪಡುವ ಭಾರೀ ಕೈಗಾರಿಕೆ, ಶಕ್ತಿ ಅಥವಾ ನೀರಾವರಿ ಯೋಜನೆಗಳನ್ನು ಕೇಂದ್ರ ಪಟ್ಟಿಯಲ್ಲಿಟ್ಟು ಆ ಬಗ್ಗೆ ಸರ್ವ ಸಾಮಾನ್ಯ ಧೋರಣೆ ರೂಪಿಸಬೇಕು. ಕೈಗಾರಿಕೆ ಪರವಾನಿಗೆ ಇತ್ಯಾದಿ ವಿಷಯಗಳಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಅಧಿಕಾರಗಳ ವಿತರಣೆಯಲ್ಲಿ ಮುಖ್ಯ ಬದಲಾವಣೆ ಮಾಡಬೇಕಾಗಿದೆ. ಏಳನೇ ಷೆಡ್ಯೂಲಿನ ಪಟ್ಟಿಯನ್ನು ಪುನರ್ರಚಿಸಿ ಕೆಲವು ಕೈಗಾರಿಕೆಗಳಲ್ಲಿ ರಾಜ್ಯಗಳಿಗೆ ಮಾತ್ರ ಅಧಿಕಾರ ಕೊಡುವಂತಾಗಬೇಕು.

ಕೇಂದ್ರ ಮೀಸಲು ಪೋಲೀಸ ಅಥವಾ ಕೇಂದ್ರ ಸರಕಾರ ನಿರ್ಮಿಸಬಹುದಾದ ಬೇರೆ ಯಾವುದೇ ಪೋಲೀಸ್ ಪಡೆಗಳನ್ನು ರಾಜ್ಯಗಳಿಗೆ ಕಳಿಸುವ ಹಕ್ಕನ್ನು ವಾಪಸು ಪಡೆಯಬೇಕು. ಕಾನೂನು ವ್ಯವಸ್ಥೆ ಹಾಗೂ ಪೋಲೀಸ್ ವಿಷಯ ರಾಜ್ಯಗಳ ವಲಯಕ್ಕೇ ಸೇರಿರಬೇಕು ಕೇಂದ್ರ ತಾನು ವಿಶೇಷವಾಗಿ ನಿರ್ಮಿಸಿದ ಪಡೆಗಳೊಂದಿಗೆ ಮಧ್ಯ ಪ್ರವೇಶಿಸಬಾರದು.

ಹಣಕಾಸಿನ ವಿತರಣೆ

ಹಣಕಾಸು ಆಯೋಗ ಮತ್ತು ಕಂದಾಯ ವಿತರಣೆಗೆ ಸಂಬಂಧಪಟ್ಟ ಸಂವಿಧಾನದ ವಿಧಿಗಳನ್ನು ತಿದ್ದುಪಡಿಗೊಳಿಸಿ, ಕೇಂದ್ರ ವಿವಿಧ ಮೂಲಗಳಿಂದ ಸಂಗ್ರಹಿಸಿದ ಒಟ್ಟು ಕಂದಾಯದ 75 ಶೇಕಡಾ ರಾಜ್ಯಗಳಿಗೆ ವಿತರಣೆ ಮಾಡಲು ಹಣಕಾಸು ಆಯೋಗಕ್ಕೆ ಸಿಗುವಂತಾಗಬೇಕು. ರಾಜ್ಯಗಳು ಭಿಕ್ಷುಕರಂತೆ ಕೈಚಾಚಬೇಕಾದ ಪರಿಸ್ಥಿತಿಯನ್ನು ಹೋಗಲಾಡಿಸಲು ಇದು ಅಗತ್ಯ. ಈ 75 ಶೇಕಡಾವನ್ನು ಯಾವ ನೀತಿಯ ಮೇಲೆ, ಯಾವ ಅನುಪಾತದಲ್ಲಿ ವಿತರಿಸಬೇಕೆಂಬುದನ್ನು ಹಣಕಾಸು ಆಯೋಗ ನಿರ್ಧರಿಸಬೇಕು. ಕೇಂದ್ರ, ರಾಜ್ಯಗಳ ನಡುವೆ ಕಂದಾಯ ವಿತರಣೆಯ ಅನುಪಾತವನ್ನು ನಿರ್ಧರಿಸುವುದು ಹಣಕಾಸಿನ ಆಯೋಗದ ಕೆಲಸವಾಗದೆ ರಾಜ್ಯಗಳಿಗೆ ಕೊಟ್ಟ ಅನುಪಾತವನ್ನು ಇಟ್ಟುಕೊಳ್ಳುವುದು ಅದರ ಕೆಲಸವಾಗಬೇಕು. 380ನೇ ವಿಧಿಯ 3ನೇ ಕಾಲಮಿನ ಎ ಉಪ ಕಲಮಿನಲ್ಲಿ "ನಿವ್ವಳ ಕಂದಾಯ ವಸೂಲಿಯನ್ನು ಕೇಂದ್ರ, ರಾಜ್ಯಗಳ ನಡುವೆ ಹಂಚಬಹುದು" ಎಂದು ಇರುವುದನ್ನು ಕೈಬಿಡಬೇಕು. ರಾಜ್ಯಗಳ ನಡುವೆ ಕಂದಾಯ ವಸೂಲಿಯ ವಿತರಣೆಯ ಅನುಪಾತದ ಬಗ್ಗೆ ರಾಷ್ಟ್ರಪತಿಯವರಿಗೆ ಸಲಹೆ ನೀಡುವುದು ಹಣಕಾಸಿನ ಆಯೋಗದ ಕರ್ತವ್ಯ ಎಂಬ ಸ್ಪಷ್ಟವಾಗಿಸುವ ರೀತಿಯಲ್ಲಿ ಅದನ್ನು ಪುನರ್ರೂಪಿಸಬೇಕು. ರಾಜ್ಯಗಳಿಗೂ ತಮ್ಮದೇ ತೆರಿಗೆ ವಿಧಿಸಲು. ತಮ್ಮ ರಾಜ್ಯಗಳಲ್ಲಿ ಸಾರ್ವಜನಿಕ ಸಾಲದ ಮಿತಿಯನ್ನು ನಿರ್ಧರಿಸುವ ಅಧಿಕಾರವನ್ನು ಕೊಡಬೇಕು. ಈ ಉದ್ದೇಶ ಸಾಧನೆಗೆ ಕೇಂದ್ರ, ರಾಜ್ಯ ಹಾಗೂ ಸಮವರ್ತಿ ಪಟ್ಟಿಯನ್ನು ನೀಡಿರುವ 7ನೇ ಷೆಡ್ಯೂಲನ್ನು ಅಗತ್ಯಕ್ಕೆ ತಕ್ಕಂತೆ ತಿದ್ದುಪಡಿಗೊಳಿಸಬೇಕು.

5 ಒಂದು ರಾಜ್ಯ ಸರಕಾರವನ್ನು ಅಥವಾ ಅಲ್ಲಿನ ವಿಧಾನ ಸಭೆಯನ್ನು ವಿಸರ್ಜಿಸಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡುವ 356ನೇ ಹಾಗೂ 357ನೇ ವಿಧಿಗಳನ್ನು ಕೈ ಬಿಡಬೇಕು. ಒಂದು ರಾಜ್ಯದಲ್ಲಿ ಸಂವಿಧಾನಾತ್ಮಕ ಬಿಕ್ಕಟ್ಟು ಉಂಟಾದಲ್ಲಿ ಕೇಂದ್ರದಲ್ಲಿ ಅಂತಹ ಸಂದರ್ಭದಲ್ಲಿ ಮಾಡುವಂತೆ ಚುನಾವಣೆ ಏರ್ಪಡಿಸಿ ಹೊಸ ಸರಕಾರವನ್ನು ಪ್ರತಿಷ್ಠಾಪಿಸುವ ಪ್ರಜಾಸತ್ತಾತ್ಮಕ ಕ್ರಮಕ್ಕೆ ಅವಕಾಶವಿರಬೇಕು. ಅದೇ ರೀತಿ ಭಾರತದ ಆರ್ಥಿಕ ಸ್ಥಿರತೆ ಹಾಗೂ ಸಾಲಕ್ಕೆ ಅಪಾಯವಿದೆಯೆಂಬ ಕಾರಣ ಕೊಟ್ಟು ರಾಜ್ಯದ ಆಡಳಿತದಲ್ಲಿ ಮಧ್ಯಪ್ರವೇಶಿಸಲು ರಾಷ್ಟ್ರಪತಿಗೆ ಅಧಿಕಾರ ನೀಡುವ 360ನೇ ವಿಧಿಯನ್ನು ಕೈ ಬಿಡಬೇಕು.

6 ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳನ್ನು ರಾಷ್ಟ್ರಪತಿಯವರ ಸಮ್ಮತಿಗೆ ಮೀಸಲಿಡಲು ರಾಜ್ಯಪಾಲರಿಗೆ ಅಧಿಕಾರ ನೀಡುವ 200 ಹಾಗೂ 201ನೇ ವಿಧಿಗಳನ್ನು ರದ್ದು ಮಾಡಬೇಕು. ರಾಜ್ಯಗಳ ವಲಯದಲ್ಲಿ ರಾಜ್ಯದ ವಿಧಾನ ಮಂಡಲವೇ ಸರ್ವೋಚ್ಚವಾಗಬೇಕು. ಯಾವುದೇ ಕಾರಣದಿಂದ ಕೇಂದ್ರ ಇದರಲ್ಲಿ ಮಧ್ಯ ಪ್ರವೇಶಿಸಲು ಅವಕಾಶವಿರಬಾರದು.

ರಾಜ್ಯ ಸಭೆಗೆ ನೇರ ಚುನಾವಣೆ

7 ಒಕ್ಕೂಟದ ಘಟಕಗಳಲ್ಲಿ ಸಮಾನತೆಯ ನೀತಿಯ ಪಾಲನೆಗಾಗಿ ಹಾಗೂ ರಾಜ್ಯಗಳ ಸ್ವಾಯತ್ತತೆಯನ್ನು ಕಾಪಾಡಲು, ರಾಜ್ಯ ಸಭೆಗೂ ಜನತೆಯೇ ನೇರವಾಗಿ ಪ್ರತಿನಿಧಿಗಳನ್ನು ಲೋಕಸಭೆಯ ಪ್ರತಿನಿಧಿಗಳೊಂದಿಗೆ ಆರಿಸುವಂತಾಗಬೇಕು. ರಾಜ್ಯ ಸಭೆಯಲ್ಲಿ ರಾಜ್ಯಗಳಿಗೆ ಸಮಾನ ಪ್ರತಿನಿಧಿತ್ವ ಇರಬೇಕು. ಎರಡೂ ಸದನಗಳಿಗೆ ಸಮಾನ ಅಧಿಕಾರಗಳಿರಬೇಕು.

8 ಈಗ ಐ.ಎ.ಎಸ್. ಐ.ಪಿ.ಎಸ್. ಇತ್ಯಾದಿ ಅಖಿಲ ಭಾರತ ಸೇವೆಗಳ ಅಧಿಕಾರಿಗಳನ್ನು ರಾಜ್ಯಗಳಿಗೆ ನೇಮಿಸಲಾಗುತ್ತದೆ. ಆದರೆ ಅವರು ಕೇಂದ್ರ ಸರಕಾರದ ಮೇಲ್ವಿಚಾರಣೆ ಹಾಗೂ ಹತೋಟಿಯಲ್ಲೇ ಇರುತ್ತಾರೆ, ಇದನ್ನು ರದ್ದು ಮಾಡಬೇಕು. ಸಂಘೀಯ ಸೇವೆಗಳು ಹಾಗೂ ರಾಜ್ಯ ಸೇವೆಗಳು ಎರಡಷ್ಟೇ ಇರಬೇಕು. ಇವುಗಳಿಗೆ ಆಯ್ಕೆಯನ್ನು ಕ್ರಮವಾಗಿ ಸಂಘೀಯ ಸರಕಾರ ಹಾಗೂ ರಾಜ್ಯ ಸರಕಾರ ಮಾಡಬೇಕು. ಸಂಘೀಯ ಸರಕಾರದ ಸಿಬ್ಬಂದಿ ಸಂಘ ಸರಕಾರದ (Union Government) ಹತೋಟಿಯಲ್ಲಿ ಮತ್ತು ರಾಜ್ಯ ಸರಕಾರದ ಸಿಬ್ಬಂದಿ ರಾಜ್ಯ ಸರಕಾರದ ಹತೋಟಿಯಲ್ಲಿಯೂ ಇರಬೇಕು. ಕೇಂದ್ರ ಸರಕಾರಕ್ಕೆ ರಾಜ್ಯ ಸೇವೆಗಳ ಸಿಬ್ಬಂದಿಯ ಮೇಲೆ ಯಾವ ಅಧಿಕಾರವೂ ಇರಬಾರದು.

9. ಭಾರತದ ಐಕ್ಯತೆಗಾಗಿ ಮತ್ತು ಸಮಾನತೆ ಸಾಧಿಸಲು ಜನಸಮೂಹದ ಭಾಷೆಗಳ ಬಗ್ಗೆ ಸರಿಯಾದ ನಿಲುವು ತಳೆಯಬೇಕು.

ಹೆಚ್ಚುತ್ತಿರುವ ಆರ್ಥಿಕ, ಸಾಮಾಜಿಕ ಹಾಗೂ ಬೌದ್ಧಿಕ ಸಂಪರ್ಕದಿಂದಾಗಿ ಭಾರತದ ವಿವಿಧ ರಾಜ್ಯಗಳಲ್ಲಿನ ಜನತೆ ತಮ್ಮ ಅಗತ್ಯಗಳಿಗೆ ಯೋಗ್ಯವಾದ ಪರಸ್ಪರ ಸಂಪರ್ಕದ ಭಾಷೆಯನ್ನು ಕಾರ್ಯತಃ ರೂಪಿಸಿಕೊಳ್ಳುತ್ತಾರೆ ಎಂದು ನಮ್ಮ ಪಕ್ಷದ ಅಭಿಪ್ರಾಯ. ದೇಶದ ಅತಿ ದೊಡ್ಡ ಭಾಷಾ ಗುಂಪಿನ ಭಾಷೆಯಾದ ಹಿಂದಿಯನ್ನು ಇತರ ಜನರ ಮೇಲೆ ಹೇರಿದರೆ ಈ ಸ್ವಾಭಾವಿಕ ಪ್ರಕ್ರಿಯೆಗೆ ಅಡ್ಡಿಯಾದೀತೇ ಹೊರತು ಹಿಂದಿಗೆ ಅದರಿಂದ ಸಹಾಯವಾಗುವುದಿಲ್ಲ. ಹಿಂದಿಯೇತರ ಜನತೆ ಹಿಂದಿ ಕಲಿಯಲು ಪ್ರೋತ್ಸಾಹ ಕೊಡುವುದಕ್ಕೆ ನಮ್ಮ ಪಕ್ಷದ ಬೆಂಬಲವಿದೆಯಾದರೂ ಸಂಸತ್ತಿನಲ್ಲಿ ಹಾಗೂ ಕೇಂದ್ರದ ಆಡಳಿತದಲ್ಲಿ ಎಲ್ಲಾ ಭಾರತೀಯ ಭಾಷೆಗಳ ಸಮಾನತೆಯನ್ನು ಮಾನ್ಯ ಮಾಡಬೇಕು. ಸಂಸತ್ ಸದಸ್ಯರಿಗೆ ಯಾವುದೇ ಭಾರತೀಯ ಭಾಷೆಯಾಡುವ ಹಕ್ಕು ಇರಬೇಕು. ಹಾಗೂ ಠರಾವು ಏಕಕಾಲದಲ್ಲಿ ಇತರ ಎಲ್ಲಾ ಭಾಷೆಗಳಿಗೆ ಅನುವಾದ ಮಾಡಿ ಕೊಡಬೇಕು.

ಕೇಂದ್ರದ ಎಲ್ಲಾ ಶಾಸನಗಳು, ಸರಕಾರೀ ಆಜ್ಞೆಗಳು ಹಾಗೂ ಠರಾವುಗಳು ಎಲ್ಲಾ ಭಾರತೀಯ ಭಾಷೆಗಳಲ್ಲಿ ಒದಗಿಸಬೇಕು. ಆಡಳಿತ, ಶಾಸನ, ನ್ಯಾಯಾಂಗದ ಕ್ಷೇತ್ರಗಳಲ್ಲಿ ಹಾಗೂ ಶಿಕ್ಷಣದಲ್ಲಿ ಮಾಧ್ಯಮವಾಗಿ ಇಂಗ್ಲಿಷ್ ಬಳಕೆಯನ್ನು ಕೈಬಿಟ್ಟು ಸಂಬಂಧಪಟ್ಟ ರಾಜ್ಯಗಳ ಜನರ ಭಾಷೆಯನ್ನು ತರಬೇಕು. ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮ ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯುವ ರಾಜ್ಯದಲ್ಲಿ ಅತ್ಯುಚ್ಚಮಟ್ಟದವರೆಗೂ ಶಿಕ್ಷಣದ ಮಾಧ್ಯಮವಾಗಿ ಉಪಯೋಗಿಸುವ ಜನತೆಯ ಹಕ್ಕನ್ನು ಮಾನ್ಯ ಮಾಡಬೇಕು. ಉರ್ದು ಭಾಷೆ ಮತ್ತು ಅದರ ಲಿಪಿಯನ್ನು ಸಂರಕ್ಷಿಸಬೇಕು. ನೇಪಾಲಿಯಂತಹ ಭಾಷೆಗಳನ್ನು ಸೇರಿಸಲು ಅನುಕೂಲವಾಗುವಂತೆ ಎಂಟನೇ ಷೆಡ್ಯೂಲಿನಲ್ಲಿ ತಿದ್ದುಪಡಿಯಾಗಬೇಕು.

10. ಈಗಿನ ಪದ್ಧತಿಯಲ್ಲಿ ಅಲ್ಪ ಮತಗಳನ್ನು ಗಳಿಸಿದ ಪಕ್ಷ ಸಂಸತ್ತಿನಲ್ಲಿ ಅಥವಾ ವಿಧಾನಸಭೆಯಲ್ಲಿ ಬಹುಮತದ ಸ್ಥಾನಗಳನ್ನು ಪಡೆಯಬಹುದು. ಇದರ ಅನರ್ಥಕಾರಿ ಪರಿಣಾಮಗಳು ತುರ್ತು ಪರಿಸ್ಥಿತಿಯ ಕಾಲಲ್ಲಿ ಕಂಡುಬಂದವು. ಅಲ್ಪಮತದಿಂದ ಚುನಾಯಿತವಾಗಿದ್ದ ಕಾಂಗ್ರೆಸ್ (ಐ) ಸರಕಾರ ರಾಜ್ಯಗಳ ಹಾಗು ಜನತೆಯ ಹಕ್ಕುಗಳ ಮೇಲೆ ಸವಾರಿ ಮಾಡಿ ಸರ್ವಾಧಿಕಾರೀ ಆಡಳಿತವನ್ನು ಆರಂಭಿಸಿತು. ಆದ್ದರಿಂದ ಅನುಪಾತಿಕ ಪ್ರಾತಿನಿಧ್ಯ ಮತ್ತು ಪ್ರತಿನಿಧಿಗಳನ್ನು ವಾಪಸು ಕರೆಸಿಕೊಳ್ಳುವ ವ್ಯವಸ್ಥೆಯನ್ನು ಆರಂಭಿಸುವುದು ಅಗತ್ಯ.

11. ಭಾರತ ಸಂಘದೊಳಗೆ ಕಾಶ್ಮೀರಕ್ಕಿರುವಸದ್ಯದ ವಿಶೇಷ ಸ್ಥಾನವನು ಇಟ್ಟುಕೊಳ್ಳಬೇಕು.

ಉಳ್ಳಾಲಗ್ರಾಮ

ರೈತ ಸಂಘದ ಸಭೆ

ತಾ| 13-9-83ರಂದು ಉಳ್ಳಾಲ ಗ್ರಾಮ ರೈತ ಸಂಘದ ಸಭೆಯು ಸಂಘದ ಅಧ್ಯಕ್ಷರಾದ ಕಾ. ಗಂಗಾಧರ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು. ಕಾ. ರಾಮಚಂದ್ರ ಉಚ್ಚಿಲ್‌ರವರು ಸಭೆ ಕರೆದ ಉದ್ದೇಶವನ್ನು ವಿವರಿಸಿ, 18-9-83 ರಂದು ಜರುಗಲಿದ್ದ ತಾಲ್ಲೂಕು ರೈತ ಸಮಾವೇಶವನ್ನು ಯಶಸ್ವಿಗೊಳಿಸಲು ವಿನಂತಿಸಿಕೊಂಡರು.

ಬಳಿಕ ರೈತ ಸಂಘದ ದ. ಕ. ಜಿಲ್ಲಾ ಕಾರ್ಯದರ್ಶಿ ಕಾ| ಯು. ಜನಾರ್ಧನ ನಾಯಕ್ ಮತ್ತು ಕಾ| ಯು. ಪಿ. ಡಿಸೋಜರು ರೈತರ ಮುಂದಿರುವ ಸಮಸ್ಯೆಗಳನ್ನು ವಿವರಿಸಿ, ಇದನ್ನು ಪರಿಹರಿಸುವ ಬಗ್ಗೆ, ಸಂಘಟನೆಯನ್ನು ಬಲಿಷ್ಟಗೊಳಿಸುವ ಬಗ್ಗೆ ವಿವರಿಸಿದರು.

ನಂತರ ಸಭೆಯಲ್ಲಿ ಸ್ಥಳೀಯ ಸಮಸ್ಯೆಗಳನ್ನು ಚರ್ಚಿಸಿ ಅದನ್ನು ಬಗೆಹರಿಸುವ ಬಗ್ಗೆ ಕ್ರಮಕೈಗೊಳ್ಳುವ ದಿಕ್ಕಿನಲ್ಲಿ ಹಲವಾರು ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಬಳಿಕ ಉಳ್ಳಾಲ ಗ್ರಾಮ ರೈತ ಸಂಘಕ್ಕೆ 11ಮಂದಿಯ ಸಮಿತಿಯನ್ನು ರಚಿಸಲಾಯಿತು. ಅದರ ಅಧ್ಯಕ್ಷರಾಗಿ ಗಂಗಾಧರ ಶೆಟ್ಟಿ ಉಪಾಧ್ಯಕ್ಷರಾಗಿ ಹೆರಿ ಡಿಸೋಜ, ಕಾರ್ಯದರ್ಶಿಯಾಗಿ ಬಿ.ಆರ್.ಜೆ. ಡಿಸೋಜ, ಜತೆ ಕಾರ್ಯದರ್ಶಿಯಾಗಿ ವಿಶ್ವನಾಥ ಬಂಡಿ ಕೊಟ್ಟಿ ಅವರುಗಳು ಚುನಾಯಿತರಾದರು.

ಶ್ರದ್ಧಾಂಜಲಿ

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಮಂಗಳೂರಿನ ಮಂಗಳಾದೇವಿ ಶಾಖೆಯ ಸದಸ್ಯರೂ, ಸಕ್ರಿಯ ಕಾರ್ಯಕರ್ತರೂ ಆಗಿದ್ದ ಕಾ| ವಿವೇಕಾನಂದಗವರು ತಮ್ಮ 22ನೇ ವಯಸ್ಸಿನಲ್ಲಿ ತಾರೀಖು 4-9-1983ರಂದು ದುರ್ಮರಣಕ್ಕೀಡಾದ ಬಗ್ಗೆ ಪಕ್ಷದ ಮಂಗಳಾದೇವಿ ಮತ್ತು ಬೋಳಾರ ಪೂರ್ವ ಶಾಖೆಗಳು ತಾ. 7-9-83 ರಂದು ಸಭೆ ಸೇರಿ ಶ್ರದ್ಧಾಂಜಲಿಯನ್ನರ್ಪಿಸಿದವು. ಅಲ್ಲದೆ ಅವರ ಕುಟುಂಬದ ಸದಸ್ಯರ ದುಃಖದೊಂದಿಗೆ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷವೂ ಪಾಲ್ಗೊಳ್ಳುತ್ತದೆ.

ಕುಂದಾಪುರ

ಗೂಡಂಗಡಿ ಮಾಲೀಕರ ಸಂಘ ಸ್ಥಾಪನೆ

ಕುಂದಾಪುರ ತಾಲ್ಲೂಕಿನ ರಸ್ತೆಬದಿ ಗೂಡಂಗಡಿ ಮಾಲಿಕರ ಸಭೆಯು ದಿನಾಂಕ 28-8-83ರಂದು ಕಾ| ಅಬ್ರಹಾಂ ಕರ್ಕಡ ಕಾರ್ಯದರ್ಶಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಕುಂದಾಪುರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕಾ| ಕೆ. ವೆಂಕಟೇಶ ನಾಯಕ್‌ರವರು ಸಭಿಕರನ್ನು ಸ್ವಾಗತಿಸಿ, ಪ್ರಸ್ತಾವಿಕ ಭಾಷಣ ಮಾಡುತ್ತಾ ಗೂಡಂಗಡಿ ಮಾಲಿಕರ ಸಂಘದ ಸ್ಥಾಪನೆಯ ಅಗತ್ಯತೆ ಬಗ್ಗೆ ವಿವರಿಸಿದರು ನಗರ ನೈರ್ಮಲ್ಯ, ಸಾರ್ವಜನಿಕ ಆರೋಗ್ಯ ರಕ್ಷಣೆಯ ನೆಪ ಹೇಳಿ ಸರಕಾರೀ ಅಧಿಕಾರಿಗಳು "ಗೂಡಂಗಡಿಯನ್ನು ತೆಗೆದು ಹಾಕಿ ಜಾಗ ಖಾಲಿ ಮಾಡಬೇಕು" ಎಂದು ದಿಢೀರ್ ನೋಟೀಸು ಜಾರಿ ಮಾಡಿದ ಬಗ್ಗೆ ಸಭೆ ಕಳವಳ ವ್ಯಕ್ತಪಡಿಸಿತು. ಈ ರೀತಿಯ ಕ್ರಮ ಕೈಕೊಳ್ಳಬಾರದೆಂಬ ಬೇಡಿಕೆಯ ಮನವಿಯೊಂದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಪಿಸಲು ಸರ್ವಾನುಮತಿಯಿಂದ ತೀರ್ಮಾನಿಸಲಾಯಿತು. ಕಾ| ಅಬ್ರಹಾಂ ಕರ್ಕಡರು ತಮ್ಮ ಭಾಷಣದಲ್ಲಿ ನ್ಯಾಯ ಸಿಗುವ ತನಕ ಸಂಘಟಿತ ಹೋರಾಟ ನಡೆಸಬೇಕೆಂದು ಕರೆ ಇತ್ತರು.

ಸಂಘದ ಕಾರ್ಯಕಾರೀ ಸದಸ್ಯರನ್ನು ಈ ಕೆಳಗಿನಂತೆ ಆಯ್ಕೆ ಮಾಡಲಾಯಿತು. ಕಾ| ಕೆ. ವೆಂಕಟೇಶ್ ನಾಯಕ್ (ಅಧ್ಯಕ್ಷ) ಎ. ಆನಂದ (ಉಪಾಧ್ಯಕ್ಷ) ಬಿ. ಶಂಕರ (ಕಾರ್ಯದರ್ಶಿ) ನರಸಿಂಹ ಸೇರಿಗಾರ, ನಾರಾಯಣನ್, ನಾಗೇಶ್, ಸ್ಟೇನಿ ಕೋತ, ಭಾಸ್ಕರ, ಪಿ. ಕೆ. ರವಿ, ಕಾ| ಅಬ್ರಹಾಂ ಕರ್ಕಡ ಸದಸ್ಯರು, ಕೊನೆಯಲ್ಲಿ ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.

ಸುರಿನಾಮ್ : ದಕ್ಷಿಣ ಅಮೇರಿಕಾದ ಒಂದು ಪುಟ್ಟ ರಾಷ್ಟ್ರ

ದಕ್ಷಿಣ ಅಮೆರಿಕದಲ್ಲಿ ಅಧ್ಯಕ್ಷ ರೀಗನ್‌ಗೆ ಮತ್ತು ಸಿ.ಐ.ಎ.ಗೆ ತಲೆ ನೋವು ಹೆಚ್ಚುತ್ತಿದೆ. ಎಲ್‌ಸಾಲ್ವಡೋರ್, ಬೊಲೀವಿಯ ಈಗ ಸುರಿನಾಮ್. ದಕ್ಷಿಣ ಅಮೆರಿಕಾದ ಉತ್ತರದಲ್ಲಿ ಕರೀಬಿಯನ್ ಸಮುದ್ರತೀರದಲ್ಲಿರುವ ಒಂದು ಪುಟ್ಟ ರಾಷ್ಟ್ರವೇ ಸುರಿನಾಮ್. ಇದರ ಹಿಂದಿನ ಹೆಸರು ಡಚ್‌ಗಯಾನ ಎಂದಿತ್ತು. ಫ್ರೆಂಚ್ ಗಯಾನ ಮತ್ತು ಬ್ರಿಟಿಷ್‌ಗಯಾನದ ಮಧ್ಯೆ ನೆಲಸಿದ ಈ ರಾಷ್ಟ್ರ 1975 ರಲ್ಲಿ ಸ್ವಾತಂತ್ರ್ಯ ಹೊಂದಿತು. ಆದರೆ ಔದ್ಯೋಗಿಕವಾಗಿ ಸ್ವಾತಂತ್ರ್ಯ ಕೊಟ್ಟರೂ ಡಚ್ ಗುತ್ತೇದಾರಿ ಬಂಡವಾಳಶಾಹಿಗಳ ಸುಲಿಗೆ ಮುಂದುವರಿಯಿತು. 1980ರಲ್ಲಿ ನಡೆದ ಬಂಡಾಯ ಮತ್ತು ಆಡಳಿತ ಬದಲಾವಣೆ ಈ ಸುಲಿಗೆಯನ್ನು ಕೊನೆಗಾಣಿಸಿ ಒಂದು ಸಾಮ್ರಾಜ್ಯಶಾಹಿ ವಿರುದ್ಧ ಸರ್ಕಾರ ಅಧಿಕಾರಕ್ಕೆ ಬಂತು. ಇದೇ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ತಲೆ ನೋವನ್ನುಂಟುಮಾಡಿದ್ದು.

1,63,265 ಚ. ಕಿ. ಮೀಟರ್ ವಿಸ್ತೀರ್ಣವಿರುವ ಸುರಿನಾಮಿನ ಜನಸಂಖ್ಯೆ ನಾಲ್ಕೂವರೆ ಲಕ್ಷವಷ್ಟೇ. ಮುಖ್ಯಪಟ್ಟಣ ಮತ್ತು ಬಂದರು ಕರೀಬಿಯನ್ ತೀರದ ಪರಮಾರಿಯಾ.

ಅನೇಕ ವರ್ಷಗಳ ಕಾಲ ವಸಾಹತುಗಳ ಆಳ್ವಿಕೆಯ ಪರಿಣಾಮವಾಗಿ ಜನತೆ ಅತ್ಯಂತ ದಾರಿದ್ರ್ಯಕ್ಕೆ ಒಳಗಾಗಿದ್ದರೂ ರಾಷ್ಟ್ರವು ಸಂಪನ್ಮೂಲವಾಗಿದೆ. ಪ್ರಪಂಚದ ಬಾಕ್ಸೈಟ್ ಉತ್ಪಾದನೆಯಲ್ಲಿ ಸುರಿನಾಮ್ ನಾಲ್ಕನೆಯ ಸ್ಥಾನವನ್ನು ಪಡೆದಿದೆ. ಇದರಿಂದಲೇ ಅಲ್ಯುಮಿನಿಯಂ ತಯಾರಿಸುವುದು. ಪ್ರಪಂಚದಲ್ಲೇ ಅತ್ಯಂತ ಉತ್ತಮವಾದ ಅಕ್ಕಿಯನ್ನು ಇಲ್ಲಿ ಉತ್ಪಾದಿಸುತ್ತಾರೆ. ಬಾಳೆ, ತೆಂಗು, ಕಾಫಿ ವಿವಿಧ ಫಲವೃಕ್ಷಗಳು ಇತರ ಮುಖ್ಯ ಬೆಳೆಗಳು. ಇಷ್ಟೆಲ್ಲಾ ಬೆಳೆಗಳಿದ್ದರೂ ಅವರ ಮುಖ್ಯ ಕೈಗಾರಿಕೆಯಾದ ಅಲ್ಯುಮಿನಿಯಂ ತಯಾರಿಕೆ ಮತ್ತು ರಫ್ತುಗಳು ಅಲ್ಕೋವ (Alcoa) ಎಂಬ ಡಚ್ ಬಹುರಾಷ್ಟ್ರಸಂಸ್ಥೆಯ ಕೈಕೆಳಗಿನ ಸುರಾಲ್‌ಕೊ (Suralco) ಸುರಿನಾಮ್ ಅಲುಮಿನಿಯಮ್ ಕಂಪನಿ ನಿಯಂತ್ರಿಸುತ್ತದೆ. ಸುರಿನಾಮಿನ ಉತ್ಪಾದನೆಯ ಶೇ. 30 ರಷ್ಟು ಮತ್ತು ರಫ್ತಿನಶೇ.90ರಷ್ಟನ್ನು ಈ ಬಹುರಾಷ್ಟ್ರಸಂಸ್ಥೆಯಾದ ಅಲ್‌ಕೋವ'ದ ಕೈಯಲ್ಲಿ ಅಡಗಿದೆ.

ಸುರಿನಾಮ್ ಜನತೆ ವಿವಿಧ ವಂಶಗಳ, ಮತಗಳ ಸಂಸ್ಕೃತಿಗಳ ಬೆರಕೆಯಾಗಿದೆ, ಜನಸಂಖ್ಯೆಯ ಶೇ. 37 ರಷ್ಟು ಜನ ಭಾರತೀಯರು, ಇಂಡೋನೇಶಿಯನ್ನರು ಶೇ. 15ರಷ್ಟು, ಕ್ರಿಯೋಲ್ (ನಿಗ್ರೋ–ಬಿಳಿ ಬೆರಕೆ) ಶೇ. 30ರಷ್ಟು, ಅಮೆರಿಕನ್ ಇಂಡಿಯನ್ನರು, ನೀಗ್ರೋಗಳು ಶೇ. 13, ಚೈನೀಸ್ ಮತ್ತು ಯೂರೋಪಿಯನ್ನರು ಶೇ. 5ರಷ್ಟು ಇದ್ದಾರೆ. ಮತೀಯವಾಗಿ ನೋಡಿದರೆ ಹಿಂದೂಗಳು (ಶೇ. 26) ಇಸ್ಲಾಂ (ಶೇ,26) ರೋಮನ್ ಕ್ಯಾಥಲಿಕ್ (ಶೇ. 21) ಪ್ರಾಟೆಸ್ಟೆಂಟ್ (ಶೇ.18)ಮುಂತಾದವರಾಗಿದ್ದಾರೆ. ಈ ವಂಶೀಯ–ಸಾಂಸ್ಕೃತಿಕ ವೈವಿಧ್ಯಗಳ ಕಾರಣ ವಿವಿಧ ಮತಗಳ–ಸಾಮಾಜಿಕ ಗುಂಪುಗಳಿಗೆ ಪ್ರತ್ಯೇಕ ಪಕ್ಷಗಳಿವೆ. ಜಗನ್ನಾಥ್ ಲಚ್ಮೆಣ್ (ಲಕ್ಷ್ಮಣ್) ಎಂಬಾತನ ನೇತೃತ್ವದಲ್ಲಿರುವ ಹಿಂದೂಸ್ಥಾನಿ ಪಾರ್ಟಿ, ಇಂಡೋನೇಶಿಯನ್ನರಿಗೆ 'ಇಂಡೋನೇಶಿಯನ್ ಪಾರ್ಟಿ, ಕ್ರಿಯೋಲ್‌ಗಳಿಗೆ ಮತ್ತೊಂದು ಪಕ್ಷ ಹೀಗೆ ಹಲವಾರು ಪಕ್ಷಗಳು. ಈ ಭಿನ್ನತೆಗಳನ್ನು ಬೆಳಸಿ ಯಾದವೀ ಕಲಹವನ್ನು ತೀವ್ರಗೊಳಿಸುವುದೇ ಸಾಮ್ರಾಜ್ಯಶಾಹಿಗಳ ತಂತ್ರವಾಗಿದೆ.

ಬ್ರಿಟಿಷರೂ ಡಚ್ಚರೂ ಆಳ್ವಿಕೆ ನಡೆಸುತ್ತಿರುವಾಗ ಭಾರತದಿಂದಲೂ, ಇಂಡೋನೇಶಿಯದಿಂದಲೂ ಕಾರ್ಮಿಕರನ್ನು, ಆಫ್ರಿಕಾದಿಂದ ನಿಗ್ರೋ ಗುಲಾಮರನ್ನು ತೋಟಗಳಲ್ಲಿ ಕೆಲಸ ಮಾಡಿಸಲು ತಂದವರೇ ಸುರಿನಾಮಿನ ಪೂರ್ವಿಕರು. ಪಾಶ್ಚಿಮಾತ್ಯರಾಷ್ಟ್ರಗಳು ಅಮೆರಿಕವನ್ನು ಕಂಡು ಹಿಡಿದ ನಂತರ ಸ್ಪೈಯಿನ್‌ರೂ, ಪೋರ್ಚುಗೀಸರೂ ದಕ್ಷಿಣ ಅಮೆರಿಕಾದ ಉತ್ತರದಲ್ಲಿ ನೆಲೆಸಿದರು. ಅಮೆರಿಕಾದ ಕೆಲವು ಪ್ರದೇಶಗಳ ಬಗ್ಗೆ ಬ್ರಿಟಿಷರಿಗೂ ಡಚ್ಚರಿಗೂ ಯುದ್ಧವಾಯಿತು. ನಂತರ 'ಬ್ರೇದ್ ಒಪ್ಪಂದ'ದ ಪ್ರಕಾರ ಸುರಿನಾಮ್ ಡಚ್ಚರಿಗೆ 1815ರಲ್ಲಿ ಬಿಟ್ಟುಕೊಡಲಾಯಿತು. ಕಳೆದ 160 ವರ್ಷಗಳ ಚರಿತ್ರೆ ಗುಲಾಮರನ್ನೂ ಮತ್ತು ಜೀತರನ್ನೂ ಕಠಿನವಾಗಿ ದುಡಿಸಿದ ಸಾಮ್ರಾಜ್ಯಶಾಹಿಗಳ ಕ್ರೂರವಾದ ಶೋಷಣೆಯ ಚರಿತ್ರೆಯಾಗಿದೆ. ಮಧ್ಯೆ ಮಧ್ಯೆ ಇದರ ವಿರುದ್ಧ ಹಲವಾರು ಬಂಡಾಯಗಳು ಎದ್ದುವು. ಅದನ್ನೆಲ್ಲ ಅತಿ ಭೀಕರವಾದ ದಬ್ಬಾಳಿಕೆಯಿಂದ ಅಡಗಿಸಲಾಯಿತು.

ಎರಡನೇ ಜಾಗತಿಕ ಯುದ್ಧದ ನಂತರ ಹಾಲೆಂಡ್ ಮತ್ತು ಇಂಡೋನೇಶಿಯ ನಾಜಿ–ಜಪಾನೀಸ್ ಸೈನ್ಯಕ್ಕೆ ಶರಣಾಗತವಾದಾಗ ಸುರಿನಾಮಿನ ಸಾಮ್ರಾಜ್ಯಶಾಹಿಯ ಶಕ್ತಿ ಕುಗ್ಗಿತು. ರಾಜಕೀಯ ಪಕ್ಷಗಳ ಉದಯವಾಯಿತು. ಸ್ವಾತಂತ್ರ್ಯಹೋರಾಟ ಮುಂದುವರಿಯಿತು. ಅನೇಕ ಮುಷ್ಕರಗಳು ಪ್ರಕ್ಷೋಭೆಗಳ ಫಲವಾಗಿ 1975 ನವೆಂಬರ್ 25ರಂದು ಸುರಿನಾಮ್ ಸ್ವಾತಂತ್ರ್ಯಹೊಂದಿತು, ಆದರೆ ಮೊದಲು ವಿವರಿಸಿದ 'ಹಾಗೆ ಸುರಿನಾಮ್ ಜನತೆಗೆನಿಜವಾದ ಸ್ವಾತಂತ್ರ್ಯವಾಗಲಿ, ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಾಗಲಿ, ಆರ್ಥಿಕ ಸಾಮಾಜಿಕ ರಂಗದಲ್ಲಿ ಯಾವ ಪ್ರಗತಿಯನ್ನಾಗಲೀ ಸಾಧಿಸಲಿಲ್ಲ. ಈ ಸಂದರ್ಭದಲ್ಲೇ 34 ವರ್ಷದ ಸೈನ್ಯಾಧಿಕಾರಿ ಕರ್ನಲ್ ದೇಸಿ ಬೌಟೇರ್‌ಸಿನ ನೇತೃತ್ವದಲ್ಲಿ ರೂಪೀಕೃತವಾದ 'ರಾಷ್ಟ್ರೀಯ ಸೈನಿಕ ಸಮಿತಿ' (National Military Council) ಒಂದು ರಕ್ತಪಾತವಿಲ್ಲದ ಬಂಡಾಯದ ಮೂಲಕ 1980 ಫೆಬ್ರವರಿ 25 ರಂದು ಸಾಮ್ರಾಜ್ಯಶಾಹಿಯ ದಲ್ಲಾಳಿ ಅರೋನ್ ಸರ್ಕಾರವನ್ನು ಉರುಳಿಸಿ ಅಧಿಕಾರ ವಹಿಸಿತು. ತಮ್ಮ ಸರ್ಕಾರದಧೋರಣೆಯನ್ನು ಬೌಟೇರ್ಸ್ ಹೀಗೆ ವ್ಯಕ್ತಪಡಿಸಿದ "ಕಾರ್ಮಿಕ ವರ್ಗಕ್ಕೆ, ದುಡಿಯುವ ಜನತೆಗೆ ಅಂಗೀಕಾರ ಲಭಿಸುವ ಒಂದು ನಿಜವಾದ ಕ್ರಾಂತಿಕಾರಿ ಸರ್ಕಾರ ಕಟ್ಟುವ ಸಮಯ ಬಂದಿದೆ." ಸ್ವಾಭಾವಿಕವಾಗಿ ಇದು ಅಮೆರಿಕನ್ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಮತ್ತು ಹಾಲೆಂಡಿಗೆ ಸಹಿಸಲಾಗಲಿಲ್ಲ. ಅನೇಕ ರೀತಿಯ ಕುತಂತ್ರ ಒಳಜಗಳಗಳನ್ನು ಮಾಡಲು ಪ್ರಯತ್ನಿಸಿತು. ಈ ಒಳಸಂಚುಗಳನ್ನೆಲ್ಲಾ ಬೌಟೇರ್ಸ್ ಸರ್ಕಾರ ಸದೆಬಡಿಯಿತು. ಈ ಗಲಭೆಗೆಲ್ಲಾ ಅಮೆರಿಕನ್ ರಾಯಭಾರಿ ಕಛೇರಿ, ಡಚ್ ಸರ್ಕಾರ, ಸಿ.ಐ.ಎಗಳ ಕೈವಾಡವಿತ್ತೆಂಬುದು ರುಜುವಾತಾಗಿದೆ. ಸುರಿನಾಮ್ ಸರ್ಕಾರವನ್ನು ಉರುಳಿಸಲು 120 ಲಕ್ಷ ಡಾಲರ್ ಖರ್ಚು ಮಾಡುವುದಾಗಿ ರೀಗನ್ ಬಹಿರಂಗವಾಗಿ ಹೇಳಿದ್ದಾರೆ.

ಸುರಿನಾಮಿನ ಕ್ರಾಂತಿಕಾರಿ ನೇತೃತ್ವ ಕಿಂಚಿತ್ತೂ ಹೆದರದೆ ಈ ಎಲ್ಲ ಒಳಸಂಚುಗಳನ್ನು ಎದುರಿಸಿ ತುರ್ತಾಗಿ ರಾಜಕೀಯ–ಆರ್ಥಿಕ ಉನ್ನತಿಯ ಕಾರ್ಯಕ್ರಮವನ್ನು ಜಾರಿ ಮಾಡಲು ಗಮನಕೊಟ್ಟಿದೆ. ಕ್ರಾಂತಿಯ ಮೂಲಭೂತ ರಾಜಕೀಯ ಸಂಘಟನೆಯನ್ನು ಬಲಪಡಿಸಿ ಜನತೆಯನ್ನು ಅಣಿಗೊಳಿಸದೆ ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಎದುರಿಸಲಾಗುವುದಿಲ್ಲವೆಂದು ತಿಳಿದುದರಿಂದ ಅದಕ್ಕಾಗಿ ಸೈನಿಕರೊಂದಿಗೆ ಸಿವಿಲಿಯನ್ ಜನತೆಯೂ ಭಾಗವಹಿಸುವ ಒಂದು ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಹೆಂಗ್‌ಚಿನ್‌ಎಸೆನ್ ಎಂಬವರು ರಾಷ್ಟ್ರದ ಅಧ್ಯಕ್ಷರಾಗಿದ್ದಾರೆ. ಸೈನ್ಯಾಧಿಕಾರಿಯಾದ ಕರ್ನಲ್ ಬೌಟೇರ್ಸ್‌ನೊಂದಿಗೆ ರಾಷ್ಟ್ರೀಯ ಸೈನಿಕ ಸಮಿತಿಯ ಅಧ್ಯಕ್ಷರಾಗಿ ಸಾರ್ಜೆಂಟ್ ಹಾರ್‌ಡೋಫ್ ಎಂಬುವರೂ ಶ್ರಮಿಸುತ್ತಿದ್ದಾರೆ. 1981 ನವೆಂಬರ್ 11 ರಂದು ಜನತಾ ರಾಷ್ಟ್ರೀಯ ಸಂಘಟನೆಗಳನ್ನು ಒಗ್ಗೂಡಿಸಿ ರೂಪಿಸಿದ 'ಕ್ರಾಂತಿಕಾರಿ ಮುಂಚೂಣಿ'ಯೇ ಸುರಿನಾಮಿನ ಮುಖ್ಯ ರಾಜಕೀಯ ಪಕ್ಷವಾಗಿದೆ.

ಪೀಪಲ್ಸ್ ರೆವಲ್ಯೂಷನರಿ, ನ್ಯಾಷನಲಿಸ್ಟ್ ರೆವಲ್ಯೂಷನರಿ, ಡೆಮಾಕ್ರಟಿಕ್ ಎಂಬೀ ಮೂರು ರಾಜಕೀಯ ಪಕ್ಷಗಳು, ಯುವ ಜನತೆ, ಪುರೋಗಾಮಿ ಬುದ್ಧಿ ಜೀವಿಗಳು ಈ ಮುಂಚೂಣಿಯಲ್ಲಿ ಶ್ರಮಿಸುತ್ತಿದ್ದಾರೆ.

ಕ್ರಾಂತಿಯನ್ನು ರಕ್ಷಿಸುವುದರ ಜೊತೆಗೆ ವಿದ್ಯಾಭ್ಯಾಸ, ಆರೋಗ್ಯ ಸಂರಕ್ಷಣೆ, ಅತ್ಯವಶ್ಯಕ ಪದಾರ್ಥಗಳ ವಿತರಣೆ, ಬೆಲೆಯನ್ನು ನಿಯಂತ್ರಿಸುವುದು, ಕೈಗಾರಿಕಾ ಪ್ರಗತಿ ಇವುಗಳಲ್ಲೆಲ್ಲಾ ಕಳೆದ ಮೂರು ವರ್ಷಗಳಲ್ಲಿ ಅಪಾರ ಸಾಧನೆಯನ್ನು ಈ ಕ್ರಾಂತಿಕಾರಿ ಸರ್ಕಾರ ಮಾಡಿದೆ.

ಸುರಿನಾಮಿನ ಪ್ರಗತಿಗೆ ಲ್ಯಾಟಿನ್ ಅಮೆರಿಕಾದ ಕ್ರಾಂತಿಕಾರಿ ಚಳುವಳಿಯ ಮುಂಚೂಣಿ ರಾಷ್ಟ್ರವಾದ ಕ್ಯೂಬ ಎಲ್ಲ ರೀತಿಯ ನೆರವು ನೀಡಿದೆ. ಗ್ರಾನಡ ನಿಕರಾಗುವ ಮುಂತಾದ ಎಡಪಂಥೀಯ ರಾಷ್ಟ್ರಗಳು, ಮೆಕ್ಸಿಕೊ, ಕೊಲಂಬಿಯ ಮುಂತಾದ ತಟಸ್ಥ ರಾಷ್ಟ್ರಗಳೂ ಸುರಿನಾಮಿಗೆ ಸಹಾಯ ಮಾಡುತ್ತಿವೆ.

ಇತ್ತೀಚೆಗೆ ದೆಹಲಿಯಲ್ಲಿ ನಡೆದ ಅಲಿಪ್ತರಾಷ್ಟ್ರಗಳ ಸಮ್ಮೇಳನದಲ್ಲಿ ಭಾಗವಹಿಸಿದ ಕರ್ನಲ್ ಬೌಟೇರ್ಸ್ ತನ್ನ ರಾಷ್ಟ್ರದ ನಿಯಮ ಧೋರಣೆಯನ್ನು ಸ್ಪಷ್ಟವಾಗಿ ಈ ರೀತಿ ವ್ಯಕ್ತಪಡಿಸಿದರು. "ಸಾಮ್ರಾಜ್ಯಶಾಹಿಗಳ, ವಸಾಹತುಗಳ,ಆಧುನಿಕ ವಸಾಹತುಗಳ ವರ್ಣಭೇಧಗಳ ವಿರುದ್ಧ ಶಾಂತಿಗಾಗಿ ಅಂತರರಾಷ್ಟ್ರೀಯ ರಕ್ಷಣೆಗಾಗಿ ಅಲಿಪ್ತರಾಷ್ಟ್ರಗಳ ಚಳುವಳಿ ನಡೆಸುವ ಹೋರಾಟಕ್ಕೆ ಸುರಿನಾಮಿನ ಸಂಪೂರ್ಣ ಬೆಂಬಲವಿರುತ್ತದೆ."

ದಕ್ಷಿಣ ಅಮೇರಿಕಾದ ಸುರಿನಾಮ್ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಒಂದು ಸಿಂಹ ಸ್ವಪ್ನವಾಗಿದೆ.

– ಚಿಂತಾ ವಾರ ಪತ್ರಿಕೆಯಿಂದ.

– ಎಂ ಡಿ.

ನೀರಲಕೋಡ ರೈತ ಸಂಘದ ಕಚೇರಿ ಉದ್ಘಾಟನೆ

ಗುಲ್ಬರ್ಗಾ ಜಿಲ್ಲೆಯ ನೀರಲಕೋಡ ಗ್ರಾಮದ ಕರ್ನಾಟಕ ಪ್ರಾಂತ ರೈತ ಸಂಘದ ಕಟ್ಟಡ ಮುಗಿದಿದ್ದು, ಅದರ ಉದ್ಘಾಟನೆಯನ್ನು ದಿನಾಂಕ 10–9–83 ರಂದು ಶ್ರೀ ಸಿದ್ದಣಾಮಾಶಾ ಅವರು ನೆರವೇರಿಸಿದರು.

ಕಛೇರಿ ಉದ್ಘಾಟನೆಯ ಸಮಾರಂಭದ ಅಧ್ಯಕ್ಷತೆಯನ್ನು ಮಲ್ಲರಾವ್ ಕಠಾರೆ ಅವರು ವಹಿಸಿದರು. ಮುಖ್ಯ ಅತಿಥಿಯಾಗಿ ಮುತ್ತು ಕೋಡೆ ಗ್ರಾಮದ ಕ. ಪ್ರಾ. ರೈ. ಸಂಘದ ಕಾರ್ಯದರ್ಶಿ ಯಶ್ವಂತರಾವ್ ಪಾಟೀಲ್ ಆಗಮಿಸಿದ್ದರು.

ಆಫೀಸ್ ಕಟ್ಟಡವನ್ನು ಉದ್ಘಾಟಿಸುತ್ತ ಮಲ್ಲಿಕಾರ್ಜುನಸೊನ್ನ, ರೈತರ ಹೋರಾಟ ಮತ್ತು ನ್ಯಾಯಯುತ ಚಳುವಳಿಗೆ ಬೆಂಬಲ ಕೊಡುವುದಾಗಿ ತಿಳಿಸಿದರು. ಆಳುವ ವರ್ಗದ ದಬ್ಬಾಳಿಕೆ ವಿರುದ್ಧ ರೈತರು ಒಗ್ಗಟ್ಟಾಗಿ ಹೋರಾಡಬೇಕೆಂದು ಕಾ। ನಿಂಗಣ್ಣ ಮೋರಟಗಿ ಭಾಷಣದಲ್ಲಿ ತಿಳಿಸಿದರು.

ಸೊನ್ನ ಗ್ರಾಮ, ಹೆಗ್ಗಿನಾಳ, ಮುತ್ತುಕೋಡ ಗ್ರಾಮದ ರೈತರು ಸಭೆಯಲ್ಲಿ ಭಾಗವಹಿಸಿದ್ದರು.

ಆಫೀಸ್ ಕಟ್ಟಡವನ್ನು ನೀರಲಕೋಡ್ ಗ್ರಾಮದ ರೈತರು ತಮ್ಮ ಸ್ವಂತ ಪರಿಶ್ರಮದಿಂದ ಕಟ್ಟಿ ಮುಗಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ವಿದೇಶಿ ಸಾಹಿತ್ಯ ಕೃತಿಗಳ ಪ್ರಕಟನೆಯಲ್ಲಿ ದಾಖಲೆ

ಕಳೆದ ಮೂರು ವರ್ಷಗಳಿಂದೀಚೆಗೆ ಸೋವಿಯತ್ ಒಕ್ಕೂಟದಲ್ಲಿ ವಿದೇಶಿ ಭಾಷೆಗಳ ಸಾಹಿತ್ಯ ಕೃತಿಗಳ ಅನುವಾದಿತ ಪುಸ್ತಕಗಳ ಪ್ರಕಟನೆ ಹೆಚ್ಚಿತು. 1975 ರಲ್ಲಿ, ಸುಮಾರು 80 ಮಿಲಿಯ ಪ್ರತಿಗಳಷ್ಟು ಭಾಷಾಂತರ ಕೃತಿಗಳು ಪ್ರಕಟವಾದುವು. ಐದು ವರ್ಷಗಳ ನಂತರ ಇವುಗಳ ಪ್ರಮಾಣ 128 ಮಿಲಿಯದಷ್ಟಾಯಿತು.

ಅಮೆರಿಕಾ ಜಪಾನ್, ಫ್ರಾನ್ಸ್‌ನಲ್ಲಿ ಮುದ್ರಣವಾಗುವ ಭಾಷಾಂತರ ಕೃತಿಗಳಿಗಿಂತ ಇಮ್ಮಡಿ ಪ್ರಮಾಣದಲ್ಲಿ ಹಾಗೂ ಬ್ರಿಟನ್ನಿನಲ್ಲಿ ಪ್ರಕಟವಾಗುವ ಭಾಷಾಂತರ ಕೃತಿಗಳಿಗಿಂತ ಐದು ಪಟ್ಟು ಹೆಚ್ಚು ಭಾಷಾಂತರ ಕೃತಿಗಳು ಸೋವಿಯತ್ ಒಕ್ಕೂಟದಲ್ಲಿ ಪ್ರಕಟವಾಗುತ್ತವೆ ಎಂದು ಯುನೆಸ್ಕೋ ಮಂಡಳಿ ಅಭಿಪ್ರಾಯಪಡುತ್ತದೆ. ಒಟ್ಟಿನಲ್ಲಿ ಭಾಷಾಂತರ ಕೃತಿಗಳ ಪ್ರಕಟಣೆಯಲ್ಲಿ ಸೋವಿಯೆತ್ ರಾಷ್ಟ್ರ ಜಗತ್ತಿನಲ್ಲಿಯೇ ಅಗ್ರಸ್ಥಾನದಲ್ಲಿದೆ ಎಂದೂ ಅದು ಅಭಿಪ್ರಾಯ ಪಟ್ಟಿದೆ.

ಸೋವಿಯತ್ ಆಡಳಿತ ಸ್ಥಾಪನೆಯಾದ ನಂತರದ ವರ್ಷಗಳಲ್ಲಿ ಸೋವಿಯತ್ ರಾಷ್ಟ್ರದಲ್ಲಿ 150 ರಾಷ್ಟ್ರಗಳ ವಿದೇಶಿ ಲೇಖಕರ 80. ಸಾವಿರ ಶೀರ್ಷಿಕೆಗಳ ಪುಸ್ತಕಗಳು ಹಾಗೂ ಕಿರು ಹೊತ್ತಗೆಗಳು 2, 200 ಮಿಲಿಯ ಪ್ರತಿಗಳಷ್ಟು ಪ್ರಕಟವಾಗಿವೆ, ಸೋವಿಯತ್ ನಾಡಿನ 80 ಭಾಷೆಗಳಲ್ಲಿ ಅವು ಪ್ರಕಟವಾಗಿವೆ.

ಅಕ್ಟೋಬರ್ ೮, ೯ ರಂದು ಬೆಂಗಳೂರಿನಲ್ಲಿ ಡಿ.ವೈ.ಎಫ್.ಐ ರಾಜ್ಯ ಸಂಘಟನಾ ಸಮಿತಿಯ ಸಭೆ

ವಿಜಯ ನಗರ ಉಕ್ಕಿನ ಕಾರ್ಖಾನೆಯನ್ನು ಒತ್ತಾಯಿಸಿ 15–9–83 ರಂದು ಬೃಹತ್ ಸೈಕಲ್ ಜಾತಾ, ಧರಣಿ, ಸತ್ಯಾಗ್ರಹ, ಮೆರವಣಿಗೆ ನಡೆಸಿದ ಜಿಲ್ಲಾ ಸಮಿತಿಗಳಿಗೆ ರಾ. ಸಂ. ಸಮಿತಿಯು ಅಭಿನಂಧಿಸಿದೆ. 1983 ಅಕ್ಟೋಬರ್ 8, 9ರ ಶನಿವಾರ ಮತ್ತು ಭಾನುವಾರ ಎರಡು, ದಿನಗಳು ಬೆಂಗಳೂರಿನಲ್ಲಿ ಡಿ. ವೈ. ಎಫ್. ಐ. ರಾಜ್ಯ ಸಂಘಟನಾ ಸಮಿತಿಯ ಸಭೆ ಸೇರುತ್ತದೆ.

ರಾಜ್ಯ ಸಮಿತಿಯ ಸದಸ್ಯರುತಮ್ಮ ಜಿಲ್ಲೆಗಳ ಪೂರ್ಣವರದಿಯನ್ನು ಮತ್ತು ಸದಸ್ಯತ್ವದ ರಶೀದಿ ಪುಸ್ತಕಗಳು ಹಾಗೂ ಕೌಂಟರ್ ಫ್ಹಾಲುಗಳನ್ನು ತರಬೇಕೆಂದು ವಿನಂತಿಸಲಾಗಿದೆ.

ರಾಜ್ಯ ಸಮಿತಿಯು 2ನೇರಾಜ್ಯ ಸಮ್ಮೇಳನದ ಬಗ್ಗೆ ತೀರ್ಮಾನಿಸಬೇಕಿರುವುದರಿಂದಲೂ, ಡಿಸೆಂಬರ್ 1983ರಲ್ಲಿ ಸಮ್ಮೇಳನ ನಡೆಯಬೇಕಿರುವುದರಿಂದ ರಾಜ್ಯ ಸಮಿತಿಯ ಸಭೆಯ ನಂತರ ಸದಸ್ಯತ್ವವನ್ನು ನೊಂದಾಯಿಸಬಾರದೆಂದು ಕೋರಿದೆ. ಸದಸ್ಯತ್ವ ನೊಂದಾಯಿಸಲು ಇಚ್ಛಿಸುವವರು 1984ಕ್ಕೆ ನೊಂದಾಯಿಸಬಹುದೆಂದು ರಾಜ್ಯ ಸಮಿತಿಯು ಸೂಚಿಸುತ್ತದೆ.

ರಾಜ್ಯ ಸಮಿತಿಯ ಸದಸ್ಯರು 8–10–83ರ ಶನಿವಾರ ಬೆಳಿಗ್ಗೆ 10 ರೊಳಗೆ ಸುಲ್ತಾನ್ ಪೇಟೆಯ ಆಫೀಸಿಗೆ ತಲುಪಿರಬೇಕು.

ಸಂಚಾಲಕ ;ಎಸ್. ಶಿವರಾಂ

ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಕಾರ್ಮಿಕರ ದೀರ್ಘ ಹೋರಾಟ ಅಂತ್ಯ

ರಾಯಚೂರು ಜಿಲ್ಲೆಯಲ್ಲಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಘಟಕವು ಇನ್ನೂ ಉತ್ಪಾದನೆ ಪ್ರಾರಂಭಿಸಿಲ್ಲವಾದರೂ, ನಿರ್ಮಾಣ ಹಂತದಲ್ಲಿಯೇ ಕಾರ್ಮಿಕರ ಶೋಷಣೆಗೆ ಪ್ರಾರಂಭಿಸಿದೆ. ಸುಮಾರು 600 ಕೋಟಿ ಬಂಡವಾಳದಿಂದ ಯೋಜಿಸಲಾದ ಘಟಕದಲ್ಲಿ 3000 ಕಾರ್ಮಿಕರಿಗೆ ಉದ್ಯೋಗವಕಾಶವಿದ್ದು, ನಿರ್ಮಾಣ ಹಂತದಲ್ಲಿರುವ ಪ್ರಸ್ತುತ 800 ಜನ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಇನ್ನೂ ಸಾವಿರಾರು ಕಾರ್ಮಿಕರು ದಿನಗೂಲಿಗಳಾಗಿ ಮತ್ತು ಕಂಟ್ರಾಕ್ಟ ಪದ್ಧತಿಯ ಅಮಾನವೀಯ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಕರ್ನಾಟಕದಾದ್ಯಂತ ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ನಿಯಮಿತ (ಕೆ. ಪಿ. ಸಿ.) ದ ಆಧೀನದ ಸುಮಾರು ಆರು ವಿದ್ಯುತ್ ಘಟಕಗಳು ಕೆಲಸ ಮಾಡುತ್ತಿದ್ದು ಇವೆಲ್ಲವುಗಳಲ್ಲಿ ರಾಯಚೂರು ಶಾಖೋತ್ಪನ್ನ ಕೇಂದ್ರ ಅತೀ ದೊಡ್ಡದಾಗಿದೆ.

ಈ ಮೊದಲು ಅಸ್ತಿತ್ವದಲ್ಲಿರುವ ಘಟಕಗಳಲ್ಲಿಯ ಕಾರ್ಮಿಕ ಸಂಘಟನೆಗಳು ಅಧಿಕಾರ ವರ್ಗದೊಂದಿಗೆ ಮಾಡಿಕೊಂಡ ಹಲವಾರು ಅಪಾಯಕಾರೀ ಒಪ್ಪಂದಗಳಿಂದಾಗಿ ರಾಯಚೂರು ಕಾರ್ಮಿಕರು ಸಂಕಷ್ಟಕ್ಕೊಳಗಾಗಿದ್ದಾರೆ. ಕೆ. ಪಿ. ಸಿ. ಆಡಳಿತ ನಿಯಮಗಳಲ್ಲೊಂದಾದ 'ವಿಂಗ್ ಸಿಸ್ಟಮ್'ನ್ನು ಮುರಿದು ಒಂದು ಘಟಕದಿಂದ ಮತ್ತೊಂದು ಘಟಕಕ್ಕೆ ವರ್ಗಾವಣೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಮೊದಲಿನ ಒಪ್ಪಂದ. ಈ ಒಪ್ಪಂದ ವಾಗುವಾಗ್ಗೆ ರಾಯಚೂರಿನ ಕಾರ್ಮಿಕ ಸಂಘಟನೆಯ ಪದಾಧಿಕಾರಿಗಳು ಅದನ್ನು ಪ್ರತಿಭಟಿಸಿ ಸಹಿ ಹಾಕದೆ ಇದ್ದಾಗ್ಯೂ ಅವರ ಒಪ್ಪಂದವನ್ನು ಇಲ್ಲಿಯ ಕಾರ್ಮಿಕರ ಮೇಲೆ ಬಲವಂತವಾಗಿ ಹೇರುವ ಮೂಲಕ ಆಡಳಿತ ವರ್ಗ ಬೇರೆ ಕಡೆ ಹೆಚ್ಚಾದ ಕಾರ್ಮಿಕರನ್ನು ಇಲ್ಲಿಯ ಘಟಕಕ್ಕೆ ವರ್ಗಾಯಿಸಿ, ಇಲ್ಲಿನ ಉದ್ಯೋಗ ಅವಕಾಶಗಳನ್ನು ಕಡಿಮೆಗೊಳಿಸುವದಷ್ಟೇ ಅಲ್ಲ, ಇಲ್ಲಿನ ನೌಕರ ವರ್ಗಕ್ಕೆ ಬಡ್ತಿಯ ಎಲ್ಲಾ ಅವಕಾಶಗಳನ್ನು ಕಿತ್ತುಕೊಂಡಿದೆ.

ಈ ಹಿನ್ನಲೆಯಲ್ಲಿ ಹೋದ ತಿಂಗಳ ಬಡ್ತಿಗಾಗಿ ನಡೆಸುವ ಪರೀಕ್ಷೆಗಳಲ್ಲಿ ಐದು ವರ್ಷಕ್ಕಿಂತ ಹೆಚ್ಚು ಸೇವಾ ಹಿನ್ನೆಲೆ ಇರುವವರಿಗೆ ಮಾತ್ರ ಅವಕಾಶ ಒದಗಿತು. ಹೀಗಾಗಿ ರಾಯಚೂರು ಘಟಕದಲ್ಲಿರುವ ಎಲ್ಲರಿಗೂ ಮೂರು ವರ್ಷಕ್ಕಿಂತ ಹೆಚ್ಚು ಸೇವಾ ಹಿನ್ನೆಲೆ ಇರದೆ ಇರುವುದರಿಂದ ಬೇರ ಘಟಕಗಳಿಂದ ಬಂದವರಿಗೆ ಮಾತ್ರ ಈ ಅವಕಾಶ ಒದುಗುವಂತಾಯಿತು. ಈ ಅನ್ಯಾಯವನ್ನು ಪ್ರತಿಭಟಿಸಿ ಪರೀಕ್ಷೆಗೆ ಕೊಡಬೇಕಾದ ಅರ್ಹತೆಯನ್ನು ಮೂರು ವರ್ಷ ಸೇವಾವಧಿಗೆ ಇಳಿಸಿ ಎಂದು ಇಲ್ಲಿಯ ಕಾರ್ಮಿಕ ಸಂಘಟನೆ ವಿನಂತಿಸಿಕೊಂಡರೂ ಕೇಳದೆ ಆಡಳಿತ ವರ್ಗ ಐದು ವರ್ಷ ಸೇವಾ ಹಿನ್ನೆಲೆ ಇರುವವರಿಗೆ ಪರೀಕ್ಷೆ ನಡೆಸಲು ಪ್ರಾರಂಭಿಸಿತು. ಇದನ್ನು ಪ್ರತಿಭಟಿಸಿದ ಕಾರ್ಮಿಕರು ಪರೀಕ್ಷೆ ಕೋಣೆಗೆ ನುಗ್ಗಿ ಎಲ್ಲಾ ಪರೀಕ್ಷೆಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ವಶಪಡಿಸಿಕೊಂಡು ನಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಒಪ್ಪಿಸಿದರು.

ಇದರ ವಿರುದ್ಧ ಅಧಿಕಾರಿ ವರ್ಗ ಏಳು ಜನ ಸಂಘದ ಪದಾಧಿಕಾರಿಗಳ ಮೇಲೆ ಪೋಲೀಸ್ ರಿಪೋರ್ಟ್ ಕೊಡಲಾಯಿತು. ಇದನ್ನು ಪ್ರತಿಭಟಿಸಿ ರಿಪೋರ್ಟ್ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿಕಾರ್ಮಿಕರು ಸಂಬಂಧಪಟ್ಟ ಅಧಿಕಾರಿಗಳನ್ನು ಘೇರಾವು ಮಾಡಿದರು. ಸುಮಾರು ಎಂಟು ತಾಸು ಘೇರಾವು ಮಾಡಿದ ನಂತರ, ಎ. ಸಿ. ಮುಂತಾದವರು ಮತ್ತು ಡಿ. ಸಿ. ಯವರು ಮಧ್ಯವರ್ತಿಗಳಾಗಿ ಪೋಲೀಸ್ ಕೇಸ್ ಹಿಂತೆಗೆದುಕೊಳ್ಳುವಂತೆ ಅಧಿಕಾರಿ ವರ್ಗವನ್ನು ಒಲಿಸುವದಾಗಿ ಭರವಸೆ ಇತ್ತ ನಂತರ ಕಾರ್ಮಿಕರು ಘೇರಾಯಿಸಿದ್ದ ಅಧಿಕಾರಿಗಳನ್ನು ಬಿಟ್ಟರು.

ಇದಾದ ನಂತರ ಕೊಟ್ಟ ಭರವಸೆಗಳನ್ನು ಯಾವುದೇ ರೀತಿಯಿಂದ ಈಡೇರಿಸದೆ ಘೇರಾವುನಲ್ಲಿ ಭಾಗವಹಿಸಿದ ಸಂಘದ 12 ಜನ ಸಕ್ರಿಯ ಕಾರ್ಯಕರ್ತರನ್ನು ಸೇವೆಯಿಂದ ಸಸ್ಪೆಂಡ್ ಮಾಡಲಾಯಿತು. ಸುಮಾರು ಐವತ್ತು ಜನ ಕಾರ್ಮಿಕರಿಗೆ ಷೋಕಾಸ್ ನೋಟೀಸ್ ಮತ್ತು ಮೆಮೊಗಳನ್ನು ಕೊಡಲಾಯಿತು.

ಈ ಮಧ್ಯ ಲೇಬರ್ ಆಫೀಸರ ಮಧ್ಯವರ್ತಿಯನ್ನಾಗಿ ಕನ್ಸಿಲೇಷನ್ ಏರ್ಪಡಿಸಿದರು. ಸಸ್ಪೆಂಡ್ ಮಾಡಿದ ಕಾರ್ಮಿಕರನ್ನು ಬೇಷರತ್ತಾಗಿ ವಾಪಸ್ಸು ಪಡೆಯುವವರೆಗೆ ಯಾವುದೇ ಮಾತುಕತೆಗೆ ತಯಾರಿಲ್ಲವೆಂದು ಹೇಳಿಕೆಯನ್ನಿತ್ತು ಲೇಬರ್ ಆಫೀಸಿನ ರಿಕಾರ್ಡ್‌ನಲ್ಲಿ ಯಾರೂ ಸಹಿಮಾಡದೆ ವಾಪಸ್ಸಾದರು.

ತದ ನಂತರ ಅಧಿಕಾರಿ ವರ್ಗ 12 ಜನರಿಗೆ ಆಫೀಸಿಯಲ್ ವಿಚಾರಣೆಯನ್ನು ಏರ್ಪಡಿಸಿದಾಗ ಕಾರ್ಮಿಕರು ಇದು ಅಕ್ರಮ, ಕೆ. ಪಿ. ಸಿ. ಆಡಳಿತ ನಿಯಮಗಳನ್ನು ಮುರಿದವರು ಆಡಳಿತ ವರ್ಗ, ಕಾರ್ಮಿಕರನ್ನು ವಿಚಾರಣೆಯ ನಾಟಕಮಾಡಿ ಕೆಲಸದಿಂದ ತೆಗೆದುಹಾಕುವ ಹೊಂಚನ್ನು ಧಿಕ್ಕರಿಸಿ ಕಾರ್ಮಿಕರು 1-8-83ರಿಂದ ಈ ಕೆಳಗಿನ ಬೇಡಿಕೆಗಳನ್ನು ಒತ್ತಾಯಿಸಿ ಸರಧಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು.

1. ಕೆಲಸದಿಂದ ವಜಾ ಮಾಡಿದ ಹನ್ನೆರಡು ಜನ ಕಾರ್ಮಿಕರನ್ನು ಬೇಷರತ್ತಾಗಿ ಕೆಲಸಕ್ಕೆ ಪುನಃ ನೇಮಿಸಿಕೊಳ್ಳಬೇಕು.

2. ಕಾರ್ಮಿಕರಿಗೆ ಕೊಟ್ಟ ಎಲ್ಲಾ ಮೆಮೊಗಳನ್ನು ವಾಪಸ್ಸು ಪಡೆದು, ಪೋಲೀಸರಿಗೆ ಕೊಟ್ಟ ದೂರನ್ನು ಹಿಂತೆಗೆಯಿಸಬೇಕು.

3. ಬಡ್ತಿ ನೀತಿಯ ಬಗ್ಗೆ ಮ್ಯಾನೇಜಿಂಗ್ ಡೈರೆಕ್ಟರ್‌ರೊಂದಿಗೆ ಚರ್ಚಿಸಲು ದಿನಾಂಕವನ್ನು ಕೊಡತಕ್ಕದ್ದು. ಅಲ್ಲಿಯವರೆಗೂ ಘಟಕದಲ್ಲಿ ಯಾವುದೇ ಬಡ್ತಿ ಪರೀಕ್ಷೆಗಳನ್ನು ನಡೆಸದಿರುವುದು.

ಇನ್ನೂ ನಾಲ್ಕು ಸಣ್ಣ ಪುಟ್ಟ ಏಳು ಬೇಡಿಕೆಗಳನ್ನಿಟ್ಟು ಸತ್ಯಾಗ್ರಹವನ್ನು ಪ್ರಾರಂಭಿಸಿ 21 ದಿನವಾದರೂ ಯಾವುದೇ ಪ್ರಯೋಜನವಾಗದ್ದ 23-8-83ರಿಂದ 12 ಜನ ಕಾರ್ಮಿಕರು ಅಮರಣಾಂತರ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ ನಂತರ ಘಟಕದಲ್ಲಿ ಉದ್ರಿಕ್ತ ವಾತಾವರಣ ಏರ್ಪಟ್ಟಿತು. ಎರಡು ದಿನ ಕಳೆದ ನಂತರವೂ ಆಡಳಿತ ವರ್ಗ ಮಾತುಕತೆಗೆ ಬಾರದಿದ್ದಾಗ ಎಲ್ಲಾ ಕಾರ್ಮಿಕರು ಕೆಲಸದಿಂದ ಹೊರಗಿಳಿದು ಮೇನ್ ಗೇಟ್ ಬಂದ್ ಮಾಡಲಾಯಿತು.

ಗೇಟ್ ಮುಂದೆ ದರಣಿ ಕುಳಿತ 200 ಕಾರ್ಮಿಕರನ್ನು ಪೋಲೀಸರು ಬಂಧಿಸಿ ಸಂಜೆ ಬಿಡುಗಡೆ ಮಾಡಿದರು.

ಅಮರಣಾಂತ ಸತ್ಯಾಗ್ರಹ 5ನೇ ದಿನಕ್ಕೆ ಕಾಲಿಡುತ್ತಿದ್ದಂತೆ ಕುಳಿತ 9 ಜನ ಕಾರ್ಮಿಕರ ದೇಹಸ್ಥಿತಿ ಚಿಂತಾಜನಕವಾಯಿತು. ಜಿಲ್ಲಾಧಿಕಾರಿ ಮತ್ತು ಹಿರಿಯ ಪೋಲಿಸ್ ಅಧಿಕಾರಿಗಳ ಮಧ್ಯಸ್ತಿಕೆಯಿಂದ ಹಲಾವಾರು ಭಾರಿ ಮಾತುಕತೆಯಾಗಿ 27-8-83 ರಂದು ಈ ಕೆಳಗಿನ ಒಪ್ಪಂದಕ್ಕೆ ಬರಲಾಯಿತು.

1. ಕಾರ್ಮಿಕರ ಮೇಲಿರುವ ಎಲ್ಲಾ ಮೆಮೊಗಳನ್ನು, ಮತ್ತು ಪೋಲೀಸ್ ದೂರುಗಳನ್ನು ವಾಪಸ್ ಪಡೆಯುವುದು.

2. 28-8-83ರಂದು 12 ಜನ ಕಾರ್ಮಿಕರನ್ನು ವಿಚಾರಣೆಗೆ ಗುರಿಪಡಿಸಿ 29-8-83ರ ಸಂಜೆಯೊಳಗಾಗಿ ಅವರಿಗೆ ಕೆಲಸಕ್ಕೆ ಪುನಃ ಸೇರಿಸಿಕೊಳ್ಳುವ ಆರ್ಡರ್‍ಸ್ ಕೊಡುವುದು.

3. 30 ದಿನಗಳಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್‌ರೊಂದಿಗೆ ಮಾತುಕತೆಗೆ ದಿನಾಂಕ ನಿರ್ಧರಿಸುವುದು.

ಇವೆಲ್ಲದರ ನಡುವೆ ಸಂಘದಲ್ಲಿಯ ಅಧಿಕಾರಿ ವರ್ಗದಪರವಿರುವ ಕಾರ್ಮಿಕರು ಸಂಘಟನೆಯನ್ನು ಒಡೆಯಲು ಮಾಡಿದ ಪ್ರಯತ್ನಗಳು ಅನೇಕ. ಇಷ್ಟೆಲ್ಲವನ್ನು ಮೆಟ್ಟಿನಿಂತ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗೆ ಆಶ್ವಾಸನೆ ಪಡೆದು ಮುಷ್ಕರವನ್ನು ಹಿಂತೆಗೆದುಕೊಂಡು 29-8-83ರಿಂದ ಕೆಲಸಕ್ಕೆ ಹಾಜರಾಗಲು ಸಂಘವು ನಿರ್ಧರಿಸಿದೆ.

ವರದಿ :

ತಾಯಣ್ಣ ಯರಗೇರಾ

ತುಮಕೂರು

ರೈತ ಸಂಘದ ಸಭೆ

ದಿನಾಂಕ 11-9-83 ನೇ ಭಾನುವಾರ ಸಂಜೆ ತುಮಕೂರು ಕಸಬಾ ಮರಳೂರು, ಅರೆಶೆಟ್ಟಿಕೆರೆಪಾಳ್ಯ, ಉಪ್ಪಾರಹಳ್ಳಿ, ಗೆದ್ಲಹಳ್ಳಿ, ಗೂಳೇಹರವಿ ಮತ್ತು ಗೊಳೇಹರುಪಾಳ್ಯದ ಹೆಚ್ಚಿನ ಸಂಖ್ಯೆಯ ರೈತರು-ಕೃಷಿ ಕಾರ್ಮಿಕರ ಸಭೆಯು ಮರಳೂರು ದಿಣ್ಣೆಯಲ್ಲಿ ಶ್ರೀ ಲಕ್ಷ್ಮೀನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಈ ಮೇಲ್ಕಂಡ ಗ್ರಾಮಗಳ ಸಣ್ಣ ಹಿಡುವಳಿದಾರರ, ಬಡ-ಮಧ್ಯಮ ವರ್ಗದ ರೈತರ, ಕಾರ್ಮಿಕರ ಜಮೀನುಗಳನ್ನು ತುಮಕೂರು ನಗರಕ್ಕೆ ಸೇರಿದಂತೆ ಉಪನಗರ ನಿರ್ಮಿಸಲು ಸರ್ಕಾರದವರು ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನದ ವಿರುದ್ಧ ಈ ಸಭೆಯನ್ನು ಆಯಾ ಗ್ರಾಮಸ್ಥರು ಏರ್ಪಡಿಸಿದ್ದರು, ಈ ಸಭೆಗೆ ತುಮಕೂರು ಜಿಲ್ಲಾ ರೈತ-ಕೃಷಿ ಕೂಲಿಗಾರರ ಸಂಘದ ಅಧ್ಯಕ್ಷರಾದ ಕಾ। ಟಿ. ಕೆ. ಗೋವಿಂದರಾಜು, ತುಮಕೂರು ಜಿಲ್ಲಾ ಮಾರ್ಕ್ಸಿಸ್ಟ ಕಮ್ಯುನಿಸ್ಟ ಪಾರ್ಟಿಯ ಕಾರ್ಯದರ್ಶಿಗಳಾದ ಕಾ। ಕೆ. ಆರ್. ನಾಯಕ್ ಅವರು ಆಗಮಿಸಿ. ರೈತರನ್ನುದ್ದೇಶಿಸಿ ಮಾತನಾಡಿ ರೈತರ ಸಮಸ್ಯೆಗಳೂ ಹಾಗೂ ಸರ್ಕಾರದ ಮೇಲ್ಕಂಡ ಉದ್ದಿಶ್ಯದ ವಿರುದ್ಧ ಸಂಘಟಿತ ಹೋರಾಟಕ್ಕೆ ಕರೆಯಿತ್ತರು. ಉದ್ದೇಶಿತ ಸಭೆಯ ಅವಶ್ಯಕತೆಗಳನ್ನು ಪ್ರಾರಂಭದಲ್ಲಿ ಶ್ರೀಯುತರುಗಳಾದ ರಾಮಯ್ಯ; ಹನುಮಂತರಾಯಪ್ಪ, ಚಿಕ್ಕರಾಮಣ್ಣ ಇವರುಗಳು ಬಹಿರಂಗಪಡಿಸಿ ನೆರೆದಿದ್ದ ರೈತ ಮುಖಂಡರುಗಳ ಸಲಹೆಯಂತೆ ಹೋರಾಟ ಸಮಿತಿಯನ್ನು ರಚಿಸಲಾಯಿತು.

ಈ ಹೋರಾಟ ಸಮಿತಿಯ ಮುಂದಿನ ಸಭೆಯು ದಿನಾಂಕ 18-9-83 ನೇ ಭಾನುವಾರದಂದು ಮರಳೂರಿನಲ್ಲಿ ಸೇರಿ ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಲು ತೀರ್ಮಾನಿಸಿತು.

ಬಂಟ್ವಾಳ ತಾಲ್ಲೂಕ್ ರೈತ ಸಂಘದ ಸಭೆ

ಬಂಟ್ವಾಳ ತಾಲ್ಲೂಕು ರೈತ ಸಂಘದ ವಿಸ್ತೃತ ಸಭೆ ತಾ॥ 4-9-83 ರಂದು ಕಾ। ನಾರಾಯಣರವರ ಅಧ್ಯಕ್ಷತೆಯಲ್ಲಿ ಜರುಗಿತು.

ಈ ಸಭೆಗೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ ರಾಜ್ಯದ ರೈತ ಕಾರ್ಮಿಕ ಮುಖಂಡ ಕಾ। ಎಂ. ಕೆ. ಭಟ್ಟರು ರೈತರನ್ನುದ್ದೇಶಿಸಿ ಮಾತನಾಡುತ್ತಾ ಗ್ರಾಮಾಂತರ ಪ್ರದೇಶದ ರೈತರನ್ನು ಬಡ ಕೃಷಿಕರನ್ನು ಸಂಘಟಿಸಲು ರೈತ ಕಾರ್ಯಕರ್ತರು ಮುಂದಾಗಬೇಕೆಂದು ತಿಳಿಸಿದರು. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ। ಜನಾರ್ಧನನ್ಯಾಕರು ಸಭೆಯಲ್ಲಿ ಮಾತನಾಡಿದರು.

ಹೊಸ ತಾಲ್ಲೂಕು ಸಮಿತಿಯನ್ನು ರಚಿಸಿ ಕಾ। ನಾರಾಯಣ ಕಾರ್ಯದರ್ಶಿ ಕಾ। ಶೀನ ಬಂಗೇರ ಸಹಾಯಕ ಕಾರ್ಯದರ್ಶಿ ಕಾ। ಬಿ ಎಚ್. ಬಂಗೇರ ಅಧ್ಯಕ್ಷ ಕಾ। ಬಿ. ವಾಸುಗಟ್ಟಿ ಉಪಾಧ್ಯಕ್ಷರನ್ನಾಗಿ ಆರಿಸಲಾಯಿತು.

ರಾಷ್ಟ್ರೀಯ ಭದ್ರತಾ ಶಾಸನದ ಅಡಿಯಲ್ಲಿ ಸಿ.ಐ.ಟಿ.ಯು. ಕಾರ್ಯಕರ್ತರ ಬಂಧನ

ಉತ್ತರ ಪ್ರವೇಶದ ಮೋದಿ ಟೆಕ್ಸ್‌ಟೈಲ್ ಮಿಲ್‌ನ ಸಿ.ಐ.ಟಿ.ಯು. ಕಾರ್ಮಿಕ ಸಂಘದ ಅಧ್ಯಕ್ಷ ಸುಭಾಷ್ ಮತ್ತು ಕಾರ್ಯದರ್ಶಿ ನರೇಶ್ ತ್ಯಾಗಿ ಅವರುಗಳನ್ನು ರಾಷ್ಟ್ರೀಯ ಭದ್ರತಾ ಶಾಸನದ ಅಡಿಯಲ್ಲಿ ಬಂಧಿಸಿರುವುದನ್ನು ಸಿ.ಐ.ಟಿ.ಯು.ನ ದೆಹಲಿ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸತ್ ಸದಸ್ಯ ಕಾ। ಸುಶೀಲ್ ಭಟ್ಟಾಚಾರ್ಯ ಅವರು ಹೇಳಿಕೆಯೊಂದರಲ್ಲಿ ಖಂಡಿಸಿದ್ದಾರೆ. ಸುಭಾಷ್ ಅವರು ಎಚ್.ಎಂ.ಎಸ್. ಯೂನಿಯನ್ನಿನಿಂದ ಸಿ. ಐ. ಟಿ. ಯು ಯೂನಿಯನ್ನಿಗೆ ಸೇರಿದ್ದಾರೆ, ಅಲ್ಲದೆ ಜುಲೈ 9 ರಂದು ಹೆಚ್ ಎಮ್ ಎಸ್‌ನ ಗೂಂಡಾಗಳು ನಡೆಸಿದ ಧಾಳಿಗೆ ಒಳಗಾಗಿದ್ದರು ಈ ಧಾಳಿಯಲ್ಲಿ ಇವರ ಸೋದರ ಗಿರಿರಾಜ್ ಮೃತಪಟ್ಟಿದ್ದನ್ನು ಇಲ್ಲಿ ಸ್ಮರಿಸ ಬಹುದು.

ಟ್ರೇಡ್ ಯೂನಿಯನ್ ಕಾರ್ಯಕರ್ತರ ಮೇಲೆ ಎನ್ ಎಸ್ ಎ ಅನ್ನು ಉಪಯೋಗಿಸುವುದಕ್ಕೆ ಸಿ. ಐ ಟಿ. ಯು. ಯಾವಾಗಲೂ ವಿರೋಧಿಸಿದೆ. ಮೋದಿ ನಗರದಲ್ಲಿ ಕಾನೂನು ಮತ್ತು ಶಿಸ್ತು ಪಾಲನೆಯನ್ನು ಇತರೇ ವಿಧಾನಗಳಿಂದ ಹತೋಟಿಯಲ್ಲಿಡಲು ಸಾಧ್ಯವಿದೆಯಾದ್ದರಿಂದ ಸ್ಥಾನಬದ್ಧತೆಯನ್ನು ಕೊನೆಗೊಳಿಸಬೇಕೆಂದು ಸಿ.ಐ.ಟಿ.ಯು. ಒತ್ತಾಯಿಸಿದೆ.

ವ್ಯಾಪಕ ಗುರಿ ಹೊಂದಿರುವ ರಾಜಕೀಯ ಪ್ರಚೋದನೆ

-ಕರ್ನಲ್ ಜನರಲ್ ಸೆಮ್ಯೊನ್ ರೊಮೊನೊವ್

ಅಮೇರಿಕದಿಂದ ಯಾನ ಆರಂಭಿಸಿದ ದಕ್ಷಿಣ ಕೊರಿಯಾದ ವಿಮಾನ ಸೋವಿಯೆತ್ ರಾಷ್ಟ್ರದ ಕಾಮ್ಚಾಟ್ಕಾ ಪ್ರದೇಶ, ಒಖೋತ್ಸ್ಕ್ ಸಮುದ್ರ ಪ್ರದೇಶ ಹಾಗೂ ಸಖಾಲಿನ್ ದ್ವೀಪ ಪ್ರದೇಶವನ್ನು ಅತಿಕ್ರಮಿಸಿ ಸೋವಿಯೆತ್ ವಾಯುಯಾನ ಕ್ಷೇತ್ರದಲ್ಲಿ ನುಗ್ಗಿದ ಘಟನೆ ಅತ್ಯಂತ ಒರಟು ಸ್ವರೂಪದ ಉದ್ದೇಶಪೂರ್ವಕವಾದ ಪ್ರಚೋದನೆಯಾಗಿದೆ. ನಮ್ಮ ದೇಶದ ವಾಯುಯಾನ ಕ್ಷೇತ್ರದ ಒಳ ಪ್ರವೇಶಿಸಿದ ವಿದೇಶಿ ವಿಮಾನ ನಾಗರಿಕ ವಿಮಾನಯಾನದ ಅಂತರರಾಷ್ಟ್ರೀಯ ನಿಯಮಾವಳಿಗಳನ್ನು ಹಾಗೂ ಅಂತರರಾಷ್ಟ್ರೀಯ ವಿಮಾನಯಾನ ಕುರಿತು ಚಿಕಾಗೋ ಒಡಂಬಡಿಕೆಯ ಸೂತ್ರಗಳನ್ನು ಉಲ್ಲಂಘಿಸಿದೆ.

ಅತಿಕ್ರಮಿಸಿದ ವಿಮಾನದ ಚಾಲಕ ಸಿಬ್ಬಂದಿ ವಿಮಾನದ ಆಕಾಶಯಾನ ದೀಪಗಳನ್ನು, ಢಿಕ್ಕಿ ಹೊಡೆಯುವುದನ್ನು ತಪ್ಪಿಸಲು ಸಹಾಯಕವಾಗುವ ದೀಪಗಳನ್ನೂ ಆರಿಸಿ ಹಾರಾಟ ಮುಂದುವರಿಸಿದರು. ಇದು ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನದ ನಿಯಮಾವಳಿಗಳಿಗೆ ತದ್ವಿರುದ್ಧವಾದುದು. ಅತಿಕ್ರಮಿಸಿದ ವಿಮಾನದ ಉಡ್ಡಯನವನ್ನು ತಡೆಯೊಡ್ಡಲು ಯತ್ನಿಸಿದ ಸೋವಿಯೆತ್ ಫೈಟರ್‌ಗಳ ಎಚ್ಚರಿಕೆಯನ್ನೂ ಅವು ಲೆಕ್ಕಿಸಲಿಲ್ಲ. ವಿಮಾನ ಸಮೀಪದ ಸೋವಿಯೆತ್ ವಾಯುಕ್ಷೇತ್ರಕ್ಕೆ ಸಾಗುವಂತೆ ಮಾಡಲು ಬಹಳ ಹೊತ್ತಿನವರೆಗೂ ಅವರು ಸತತ ಪ್ರಯತ್ನ ನಡೆಸಿದರು.

ಸೋವಿಯೆತ್ ಫೈಟರ್ ವಿಮಾನಗಳ ಚಾಲಕರ ಈ ಎಲ್ಲ ಪ್ರಯತ್ನಗಳೂ ವಿಫಲವಾದವು. ಒಳಪ್ರವೇಶಿಸಿದ ವಿಮಾನ ರೇಡಿಯೋ ಸಂಕೇತಗಳಿಗೆ ಪ್ರತಿಕ್ರಿಯೆ ಸೂಚಿಸಲು ನಿರಾಕರಿಸಿದ ಕಾರಣ ಸೋವಿಯೆತ್ ಪೈಲಟ್‌ಗಳು ಅದರೊಂದಿಗೆ ರೇಡಿಯೋ ಸಂಪರ್ಕ ಬೆಳೆಸಲು ನಡೆಸಿದ ಪ್ರಯತ್ನಗಳೂ ವಿಫಲವಾದವು. ಆಗ ಸೋವಿಯೆತ್ ಪೈಲಟ್ ವಿದೇಶಿ ವಿಮಾನದ ಪ್ರವೃತ್ತಿಯನ್ನು ಬದಲಾಯಿಸಲು ನಿರ್ಧರಿಸಿ, ತನ್ನ ವಿಮಾನದ ದೀಪಗಳನ್ನು ಬೆಳಗಿಸುತ್ತಾ ವಿದೇಶೀ ವಿಮಾನದ ಗಮನ ಸೆಳೆಯಲು ಅದರ ಸಂಚಾರ ಪಥದ ಸಮೀಪವೇ ಉಡ್ಡಯನ ಆರಂಭಿಸಿದ. ಈ ಪ್ರಯತ್ನಗಳೂ ಅವಶ್ಯಕ ಫಲಿತಾಂಶ ನೀಡಲಿಲ್ಲ.

ವಿದೇಶಿ ವಿಮಾನದ ಸಂಚಾರ ಪಥವನ್ನು ಅಡ್ಡಗಟ್ಟುವ ಸೋವಿಯೆತ್ ಫೈಟರ್ ವಿಮಾನಗಳು ರಾತ್ರಿಯ ಪರಿಸ್ಥಿತಿಯಲ್ಲೂ ಸೋವಿಯೆತ್ ಭೂಪ್ರದೇಶದಿಂದ 8 ಸಾವಿರದಿಂದ 10,000 ಮೀಟರ್ ಎತ್ತರದಲ್ಲಿ ತಮ್ಮ ಉಡ್ಡಯನ ಮುಂದುವರಿಸಿದುವು. ಆದರೆ ವಿದೇಶಿ ವಿಮಾನ ತನ್ನ ದೀಪಗಳನ್ನೂ ಆರಿಸಿ ಉಡ್ಡಯನ ಮುಂದುವರಿಸಿತು. ವಿಮಾನ ಹೊರ ನೋಟಕ್ಕೆ ಅಮೆರಿಕದ ಬೇಹುಗಾರಿಕೆ ವಿಮಾನ ಆರ್‌ಎಸ್-135ನ್ನು ಹೋಲುತ್ತಿತ್ತು. ನಮ್ಮ ಫೈಟರ್ ವಿಮಾನ ಅಪಾಯಕಾರಿಯಲ್ಲದ ಎಚ್ಚರಿಕೆ ಗುಂಡುಗಳನ್ನು ಅತಿಕ್ರಮಿಸಿದ ವಿಮಾನದ ಸಂಚಾರ ಮಾರ್ಗದುದ್ದಕ್ಕೂ ಹಾರಿಸಿತು.

ವಿದೇಶಿ ವಿಮಾನ ಇನ್ನೊಂದು ರಾಷ್ಟ್ರದ ವಾಯು ಕ್ಷೇತ್ರವನ್ನು ಸಂಪೂರ್ಣ ಉಲ್ಲಂಘಿಸಿದೆ ಎಂದು ಅದರ ಚಾಲಕ ಸಿಬ್ಬಂದಿಗೆ ತಿಳಿಸುವ ಉದ್ದೇಶದಿಂದಲೇ ಈ ಕ್ರಮ ಕೈಗೊಳ್ಳಲಾಯಿತು. ಇಂತಹ ಸಂದರ್ಭದಲ್ಲಿ ಈ ರೀತಿಯ ಕ್ರಮಗಳನ್ನು ಕೈಗೊಳ್ಳಬಹುದು ಎನ್ನುವ ನಿಯಮವೂ ಇದೆ.

ಸೋವಿಯತ್ ರಾಜ್ಯದ ಸೀಮೆಯನ್ನು ಉಲ್ಲಂಘಿಸಿ ಒಳನುಗ್ಗಿದ ವಿಮಾನದ ನಡವಳಿಕೆಯಷ್ಟೇ ವಿಚಿತ್ರ ಸ್ವರೂಪದ್ದಾಗಿರಲಿಲ್ಲ. ಈ ವಿಮಾನದ ವಾಯು ಸಾರಿಗೆ ನಿಯಂತ್ರಣದ ಜವಾಬ್ದಾರಿ ವಹಿಸಿದ ಅಮೇರಿಕಾ ಮತ್ತು ಜಪಾನಿನ ಸಂಸ್ಥೆಗಳ ವರ್ತನೆಯೂ ವಿಚಿತ್ರವಾಗಿತ್ತು. ವಿಮಾನಯಾನ ಸಾರಿಗೆ ನಿಯಂತ್ರಣದ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಈ ರಾಷ್ಟ್ರಗಳು ಸಹಿ ಹಾಕಿವೆ. ವಿಮಾನದ ಉಡ್ಡಯನದ ಬಗ್ಗೆ ನಿಯಂತ್ರಣ ವಿಡುವುದೇ ಈ ಒಪ್ಪಂದದ ಉದ್ದೇಶವಾಗಿದೆ.

ಈ ವರ್ಷ ಅಮೇರಿಕದ ಕದನ ವಿಮಾನಗಳು ಸೋವಿಯತ್ ಒಕ್ಕೂಟದ ಕುರೈಲ್ ದ್ವೀಪಪಥ ಪ್ರದೇಶವನ್ನು ಒಂಭತ್ತು ಬಾರಿ ಉಲ್ಲಂಘಿಸಿವೆ. ಇದಲ್ಲದೆ ಅಮೇರಿಕದ ವಿಮಾನಗಳು ರಾತ್ಮನೋವ್ ದ್ವೀಪದ ಪ್ರದೇಶವನ್ನು ಉಲ್ಲಂಘಿಸಿ ಒಳಪ್ರವೇಶಿಸಿವೆ. ಅಮೇರಿಕದ ವಾಯುಪಡೆ ಮತ್ತು ನೌಕಾಪಡೆ ಇಂತಹ ಕೃತ್ಯಗಳನ್ನು ಉದ್ದೇಶಪೂರ್ವಕವಾಗಿಯೇ ನಡೆಸುತ್ತಿವೆ ಎಂಬುದು ಖಚಿತವಾಗುತ್ತಿದೆ. ಘಟನೆಗಳು ಆಕಸ್ಮಿಕವಾದದ್ದೇನಲ್ಲ. ಈ ಪ್ರಕರಣಗಳು ನಮ್ಮೆರಡು ದೇಶಗಳ ನಡುವಣ ಸಂಬಂಧ ಸುಧಾರಣೆಗೆ ಯಾವ ವಿಧದಲ್ಲೂ ಸಹಕರಿಸಲಾರವು, ಅದರ ಬದಲು ಇನ್ನು ಹೆಚ್ಚಿನ ಸಂಶಯ, ಅಪನಂಬಿಕೆ ವಾತಾವರಣವನ್ನು ಅವು [illegible] ಬಲ್ಲುವು.

('ಸೋವಿಯತ್ ಲೇಖನ ಮಾಲೆ' ವಾರ್ತಾಪತ್ರದಿಂದ)

ಅಧಿಕಾರ ಕಳೆದುಕೊಂಡ ಕಾಂಗ್ರೆಸ್‌ನ ಸಂಸದೀಯ ವರ್ತನೆಯ ವೈಖರಿ

(ಒಂದನೇ ಪುಟದಿಂದ)

ಜನತೆಯ ಅತೃಪ್ತಿ ಬೆಳೆದು ಪಶ್ಚಿಮ ಬಂಗಾಳದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸರಕಾರದ ಜನಪ್ರಿಯ ಧೋರಣೆಗಳಿಂದ ಜನತೆಯು ಆಕರ್ಷಿತರಾಗುವುದನ್ನು ಕಂಡು ಕಾಂಗ್ರೆಸ್ಸು ಅಲ್ಲಿ ನೇರ ಗೂಂಡಾಗಿರಿಗೆ ಇಳಿದು ಸಾವಿರಾರು ರಾಜಕೀಯ ಕೊಲೆಗಳನ್ನು ಮಾಡಲು ಹೇಸಲಿಲ್ಲ. ಅದೇ ವೇಳೆ ತ್ರಿಪುರಾದಲ್ಲಿ ತಮ್ಮ ಬಹುಮತ ಉಳಿಯುವುದಿಲ್ಲವೆಂದು ಕಂಡಾಗ ವಿರೋಧ ಪಕ್ಷದ ಕಮ್ಯೂನಿಸ್ಟ್ ಸದಸ್ಯರನ್ನೂ ಜೈಲಿಗೆ ಹಾಕುವ ನೀಚ ತಂತ್ರಕ್ಕೆ ಕೈಹಾಕಿತು.

ಹರಿಯಾಣ, ಹಿಮಾಚಲ ಪ್ರದೇಶ, ಮತ್ತು ಇತ್ತೀಚೆಗೆ ಪಾಂಡಿಚೆರಿಯ ಕಥೆ ಎಲ್ಲರಿಗೂ ತಿಳಿದಿದೆ. ಈಗ ಕರ್ನಾಟಕದ ಸರತಿ ಕಾರಣ 35 ವರ್ಷಗಳ ಅವ್ಯಾಹತ ಕಾಂಗ್ರೆಸ್ ಆಡಳಿತವನ್ನು ಕಿತ್ತುಹಾಕಿ ನಾಲ್ಕು ಪಕ್ಷಗಳ ಬೆಂಬಲದ ಜನತಾ ಸರಕಾರವನ್ನು ಸ್ಥಾಪಿಸಿ ಮುದೇ ಆಗಿದೆ. ಅನೇಕ ಬೂಟಾಸಿಂಗರೂಗಳು ಹಣದ ಥೈಲಿಗಳೊಡನೆ ಬಂದು ಶಾಸಕರನ್ನು ಖರೀದಿಸಿ ತಮ್ಮ ಸರಕಾರವನ್ನು ಸ್ಥಾಪಿಸುವ ಪ್ರಯತ್ನದಲ್ಲಿ ವಿಫಲರಾದರು. ಜನತಾ ಪಕ್ಷದ ಸರಕಾರ ಆರಂಭವಾದ ದಿನದಿಂದ ಕಾಂಗ್ರೆಸ್ ಮುಂದಾಳುಗಳು ಒಂದಲ್ಲ ಒಂದು ಹೇಳಿಕೆಗಳನ್ನು ಕೊಡುತ್ತಾ ಈ ಸರಕಾರವು ಕೆಲವೇ ದಿನಗಳಲ್ಲಿ ಉರುಳುವುದೆಂದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇಲ್ಲವೆಂದು, ಹರಿಜನ ಗಿರಿಜನರಿಗೆ, ಅಲ್ಪ ಸಂಖ್ಯಾತರಿಗೆ ರಕ್ಷಣೆ ಇಲ್ಲವೆಂದು, ಇವರನ್ನು ಸರಕಾರದಲ್ಲಿ ವಿಶ್ವಾಸ ಕಳೆದುಕೊಂಡಿದ್ದಾರೆಂದು ಹೇಳುತ್ತ ಬಂದರು. ಸ್ವಲ್ಪ ಸಮಯದಲ್ಲೇ ನಮ್ಮ ಕಾಂಗ್ರೆಸ್ (ಐ) ಸರಕಾರವು ಅಧಿಕಾರಕ್ಕೆ ಬರುವುದೆಂದು ಘಂಟಾ ಘೋಷವಾಗಿ ಸಾರಿದರು. ಈ ಎಲ್ಲ ಹೇಳಿಕೆಗಳಿಗೆ ಸಮರ್ಥನೆ ಉಂಟುಮಾಡಲು ರಾಜ್ಯದ ಹಲವೆಡೆಗಳಲ್ಲಿ ಪಿತೂರಿಮಾಡಿ ಜಾತೀಯ ಗಲಭೆಗಳನ್ನು ಪ್ರಚೋದಿಸಿದರು. ಗೂಂಡಾಗಳನ್ನು ನಿರಂತರವಾಗಿ ಛೂ ಬಿಟ್ಟರು. ಹಾಡೇ ಹಗಲಲ್ಲಿ ಬಸ್ಸುಗಳನ್ನು ಸುಟ್ಟದ್ದು ಇದಕ್ಕೆ ಉತ್ತಮ ಉದಾಹರಣೆ.

ಕನಕಪುರದ ಚುನಾವಣೆ ಮತ್ತು ಪುರಸಭೆ ನಗರ ಸಭೆಗಳ ಚುನಾವಣೆಗಳಲ್ಲಿ ಸೋಲನ್ನು ಅನುಭವಿಸಿ ಹತಾಶರಾದಾಗ ತಮ್ಮ ತಂತ್ರಗಳನ್ನು ಬದಲಾಯಿಸಿದರು.

ಒಂದು ಮಾಸ್ಟರ್ ಪ್ಲ್ಯಾನ್ ತಯಾರಾಯಿತು. ಆ ದೆಹಲಿಯ ಆಶೀರ್ವಾದ ಸಿಕ್ಕಿತು. ಹಣದ ಥೈಲಿಗಳು ಜಣ ಜಣಿಸಿದುವು. ಪಕ್ಷೇತರರ ಮತ್ತು ಜನತಾ ಪಕ್ಷದ ಸದಸ್ಯರನ್ನು ಹಿಡಿಯಲು ಬಲೆ ಬೀರುವ ತಮ್ಮ ಕುಶಲತೆಯನ್ನು ಉಪಯೋಗಿಸಿದರು. ತಮ್ಮ ಪತ್ರಿಕೆಗಳಲ್ಲಿ ಪಕ್ಷಾಂತರ ಆಗೇ ಬಿಟ್ಟಿತೆಂಬ ಪ್ರಕಟಣೆ. ಜನತಾ ಪಕ್ಷದ ಶಾಸಕರಲ್ಲಿ ಒಡಕುಂಟುಮಾಡಿ ನೈತಿಕ ಧೈರ್ಯವನ್ನು ಮುರಿಯುವ ವಾತಾವರಣವನ್ನು ಸೃಷ್ಟಿಸಿದರು. ಇದೇ ವೇಳೆಯಲ್ಲಿ ವಿಧಾನ ಸಭೆಯಲ್ಲಿ ಧನ ವಿನಿಯೋಗ ಮಸೂದೆ ಮಂಡನೆಯ ಸಮಯ. ಈ ಮಸೂದೆಯನ್ನು ಸಭೆಯಲ್ಲಿ ಮಂಡಿಸಲಾಗದಂತೆ, ಅಂಗೀಕಾರವಾಗದಂತೆ ಮಾಡಲು ಯೋಜನೆ ತಯಾರಿಕೆ.

ಹೆಗ್ಗಡೆಯವರು ವಿಧಾನ ಸಭೆಯಲ್ಲಿ ರಾಜ್ಯಪಾಲರ ಸ್ಥಾನಮಾನದ ಬಗ್ಗೆ ಮಂಡಿಸಿದ ಶ್ವೇತ ಪತ್ರವನ್ನು ನೆಪ ಮಾಡಿ ಅವರು ಇಲ್ಲದ ಸಮಯ ಕಾದು ಅವರು ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನಲ್ಲಿ ಭಾಗವಹಿಸಲು ಹೋದ ಸಮಯಕಾದು ವಿಧಾನ ಸಭೆಯ ಕಾರ್ಯಕಲಾಪವನ್ನು ಸ್ಥಗಿತಗೊಳಿಸಿದರು.

ಕರ್ನಾಟಕ ಸಂಸದೀಯ ಇತಿಹಾಸದಲ್ಲಿ ಹಿಂದೆಂದೂ ನಡೆಯದ ಅತಿ ಕೀಳು ಮಟ್ಟದ ವರ್ತನೆ. ಸ್ಪೀಕರ್ ರವರನ್ನು ಮುತ್ತಿದರು ಮೈಕ್ ಕಾಗದ ಕಿತ್ತೆಸೆದರು. ಇದು 23-9-83 ರಂದು ನಡೆದ ಈ ಘಟನೆಗಳ ಸರಮಾಲೆ ಇಲ್ಲಿಗೆ ಮುಗಿಯಲಿಲ್ಲ. ಸಭಾಧ್ಯಕ್ಷರ ಮುಂದೆ ಕಾಂಗ್ರೆಸ್ ಮತ್ತು ಕ್ರಾಂತಿ ರಂಗದ ಸದಸ್ಯರು ಧರಣಿ ಕೂತರು. ಈ ಸಮಸ್ಯೆಯನ್ನು ಬಗೆಹರಿಸಲು ಎರಡು ಬಾರಿ ವಿಧಾನಸಭೆಯನ್ನು ಮುಂದೂಡಿದರೂ ಪ್ರಯೋಜನವಾಗಲಿಲ್ಲ. ಸರಕಾರದ ಪರವಾಗಿ ಎಸ್.ಆರ್. ಬೊಮ್ಮಾಯಿ ಅವರು ಮತ್ತು ಸಭಾಧ್ಯಕ್ಷರೂ ಕೂಡ ಕಾಂಗ್ರೆಸ್ ಮತ್ತು ಕ್ರಾಂತಿರಂಗದ ಸದಸ್ಯರು ತಮ್ಮ ಸ್ಥಾನಗಳಿಗೆ ಹಿಂತಿರುಗಬೇಕೆಂದು ಪದೇ ಪದೇ ವಿನಂತಿ ಮಾಡಿದರು.

ಇದರಿಂದಲೂ ಪ್ರಯೋಜನವಾಗಲಿಲ್ಲ. ಕೊನೆಗೆ 52 ಜನ ಸದಸ್ಯರನ್ನು ಸಸ್ಪೆಂಡ್ ಮಾಡಿ ಅದರಲ್ಲಿ ಕೆಲವರನ್ನು ಮಾರ್ಷಲ್‌ರವರಿಂದ ಹೊರಗೆ ಹಾಕಿಸಿದ ಮೇಲೆಯೇ ಅಂದು ಸಭೆ ನಡೆಯಲು ಸಾಧ್ಯವಾಯಿತು. ಕೊನೆಗೂ ಧನ ವಿನಿಯೋಗ ಮಸೂದೆ ಸದನದ ಮಂಜೂರಾತಿ ಪಡೆಯಿತು.

ನನ್ನ ನೆಲದ ಸಾವುಗಳು

ನನ್ನ ನೆಲದಲ್ಲಿ
ಅಂದರೆ ಇಂಡಿಯಾದಲ್ಲಿ ಸಾಯುತ್ತಾರೆ
ಎಲ್ಲೆಲ್ಲೂ ಸಾಯುತ್ತಾರೆಂದಿರ ?
ಹೌದು
ಆದರೆ ಸುತ್ತ ಸರಿ ಸರಿದೋಡುವ
ಅನ್ನದ ತಟ್ಟೆಗಳ ಅಟ್ಟಹಾಸದ ಮಧ್ಯೆ
ಸಾಯುವ ಈ ದುರಂತದ ಸಾವುಗಳೇ ಬೇರೆ —

ಈ ಸಾವುಗಳು ಪತ್ರಿಕೆಗಳ ಕಾಲಂನಲ್ಲಿ
ಅಚ್ಚು ಮೊಳೆಗಳಾಗುವುದಿಲ್ಲ.
ಸ್ಮಶಾನದಲ್ಲಿ ಬಣ್ಣದ ಗೋರಿಗಳಾಗುವುದಿಲ್ಲ
ನರಿನಾಯಿ ಹದ್ದುಗಳಿಗೆ ಭೋಜನವಾಗುವುದಿಲ್ಲ
ಏಕೆಂದರೆ ಈ ಹೆಣಗಳೊಳಗೆ
ಹಸಿ ಮಾಂಸವಿಲ್ಲ ಬಿಸಿ ರಕ್ತವಿಲ್ಲ, ರುಚಿ ಚರ್ಮವಿಲ್ಲ.

ಸದ್ದಿಲ್ಲದೇ ಸುದ್ದಿಯಾಗದೇ
ನೆಗೆದು ಬೀಳುವ ಸಾವುಗಳಿವು
ಕಣ್ಣೀರು ಕುಡಿಕುಡಿದು
ಪುಡಿಗೂಡಿ ಹೋಗುವ ಈ ಸಾವುಗಳಿಗೆ
ಕಣ್ಣೀರು ಎಲ್ಲಿಯೂ ಹರಿಯುವುದಿಲ್ಲ
ಚರಮಗೀತೆ ತೇಲುವುದಿಲ್ಲ
ದಹಿಸಲು ಕಟ್ಟಿಗೆಯೂ ಕೂಡಲಿಕ್ಕಿಲ್ಲ.

ಈ ಸಾವುಗಳು
ಊರು ಕೇರಿ ಬಿಟ್ಟು ದೂರ ಹೋಗಿ ಚೀತ್ಕರಿಸಿ
ಸೌಧಗಳ ನಿದ್ರೆ ಕೆಡಿಸುವುದಿಲ್ಲ.
ರಾಜಧಾನಿಯ ರಾಜರ ಕಿವಿ ಮುಟ್ಟುವುದಿಲ್ಲ
ಮುಟ್ಟಿದರೂ ಹೃದಯ ತಟ್ಟುವುದಿಲ್ಲ.
ಏಕೆಂದರೆ ಅಲ್ಲಿ ಹೃದಯವೇ ಇಲ್ಲ.

ತಲೆ ಒಡೆಯದೇ , ಗುಂಡಿಕ್ಕದೇ , ರಕ್ತ ಹರಿಸದೇ
ಸತ್ತು ಹೋಗುವ ವಿಚಿತ್ರ ಸಾವು
ಎಲ್ಲದರ ಸಮ್ಮಿಶ್ರಿತ ಅದ್ಭುತ ಪ್ರಾರ್ಥಿಕೆ
ಈ —
ಇಂಡಿಯಾದ ಹಸಿವಿನ ಸಾವು

-ಅಶೋಕ ಶೆಟ್ಟರ

('ಕನ್ನಡ ಪ್ರತಿಭಟನೆ ಕಾವ್ಯ' ಸಂಕಲನದಿಂದ)

Printed & Published by P. Ramachandra Rao by him on behalf of the Communist Party of India (Marxist) Karnataka State Committee V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154 Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRARAO